Reg. No. M. 1550.

If not delivered please return to

"KODAGU" OFFICE MERCARA.

45(8)

ಕೊಡಗು.

ಸರ್ವೇಷಾಂ ಭೂತದಯಯಾ ವಿದ್ಯಾ ನೀತಿ ಪ್ರಯತ್ನತಾ | ಜಗತ್ಯಸ್ಮಿನ್ ದೇಶಾನಾಂ ಸುಸ್ಥಿರಾ ರಾಜ ಸಂಪದಾ

ವಾರ್ಷಿಕ ಚಂದಾ ರೂ. ೩—೪—೦. ಸಂಪಾದಕ—ಮೂಚಿಮಂಡ ಯು೦. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೩ನೇ ಇಸವಿ ಫೆಬ್ರವರಿ ತಾರೀಕು ೩ನೇ ಶುಕ್ರವಾರ. | ಸಂಚಿಕೆ ೩೫

SARI-PIN.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

BRACELETS.
Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS.

Attractive ahd inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws cut-ruby ear-rings. etc., etc., etc., in all prices Very attractive Prices most moderate.

Estimates free on enquiry

V. Subramaniyer
Jeweller.

Designs free on enquiry.

Telegrams: 'PRECIOUS.'

Telephone: 3145.

CATALOGUE ON

ENQUIRY.

52–10

Post Box 423, Triplicane, P. O., MADRAS.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ
ಯಾವ ಗುಣಗಳು ಅವಶ್ಯಕವೆಂದು ನೀವು
ತಿಳಿದಿರುತ್ತೀರೋ ಆ ಗುಣಗಳೆಲ್ಲಾ
ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.
ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬಿಂಗಳೂರು.

52–21

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಆ ಜ ವಿ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ನಮೂನೆಯ ಶೇಕಡ
1911	46,248	49,442	82.9
1921	2,92,627	6,53,350	43.2
1931	12,50,000	40,00,000	28.2

ಬೋನಸ್ಸು.

ತುರ್ತು ನಷ್ಟ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್
ವಿಂಟೋ ಅಸ್ಪತ್ರೆ ಬಳಿ,
ಬೆಂಗಳೂರು.

52—40

ಕೊಡಗು.

ಸನ್ ೧೯೩೩ನೇ ಇಸವಿ

ಫೆಬ್ರವರಿ ತಾ. ೩ನೇ ಶುಕ್ರವಾರ.

ಕೊಡಗಿನ ಉದ್ಯೋಗಗಳಲ್ಲಿ ಬದಲಾವಣೆಯ ಸಲಹೆಗಳು.

ತಾ. 23—1—33 ರಲ್ಲಿ ಕೊಡಗಿನ ಎಲ್ಲಾ ರಾಜಕೀಯ ಸಂಸ್ಥೆಗಳ ಪ್ರತಿನಿಧಿಗಳು ಕಮಿಶನರನ್ನು ಕಂಡು ಕೊಡಗಿನ ಉದ್ಯೋಗಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕೆಂತ ಸಲಹೆ ಕೊಟ್ಟರಂತೆ. ಈ ಬದಲಾವಣೆಗಳು ಯಾವವು ಎಂಬದನ್ನು ತಾ. 20—1—33 ರ ನಮ್ಮ ಸಂಚಿಕೆಯ ಅಗ್ರಲೇಖನ ಓದರಲ್ಲಿ ವಿವರಿಸಿದ್ದೇವೆ. ಇವುಗಳಲ್ಲಿ ಯಾವುದೂ ಆಕ್ಷೇಪಣೆಗೆ ಗುರಿಯಾಗಬಹುದಾದವು ಇಲ್ಲ. ಮಲಬಾರಿನಿಂದ ಡಿಸ್ಟ್ರಿಕ್ಟ್ ಜಡ್ಜಿಯೊಬ್ಬರನ್ನು ಕೊಡಗಿನ ಡಿಸ್ಟ್ರಿಕ್ಟ್ ಜಡ್ಜಿಯರಾಗಿ ಕೆಲಸ ಮಾಡುವಂತೆ ವ ದ್ರಾಸ್ ಸರಕಾರವನ್ನು ಕೇಳಿಕೊಳ್ಳುವುದೇ ಮುಖ್ಯ ಭಾಗ. ಒಂದು ಜಿಲ್ಲೆಯ ಡಿಸ್ಟ್ರಿಕ್ಟ್ ಜಡ್ಜಿಯರು ಜುಡಿಶಿಯಲ್ ಕಮಿಶನರಾಗಿ ಕೆಲಸ ಮಾಡಲು ಬರುತ್ತಿರುವಾಗ್ಯೆ ಇನ್ನೊಂದು ಜಿಲ್ಲೆಯವರು ಡಿಸ್ಟ್ರಿಕ್ಟ್ ಜಡ್ಜಿಯರಾಗಿ ಬರಲು ಒಪ್ಪಿಯೂರೋ ಎಂಬ ಸಂಶಯಕ್ಕೆ ಏನೂ ಕಾರಣವಿಲ್ಲ. ಯಾಕೆಂದರೆ ಮದ್ರಾಸಿನ ಜಿಲ್ಲೆಯೊಂದಾದ ಮಲಬಾರಿನಲ್ಲೂ ಅವರು ಡಿಸ್ಟ್ರಿಕ್ಟ್ ಜಡ್ಜಿಯರಾಗಿಯೇ ಇರುವವರಾದ್ದರಿಂದ ಕೊಡಗಿನಲ್ಲೂ ಡಿಸ್ಟ್ರಿಕ್ಟ್ ಜಡ್ಜಿಯಾಗಿಯೇ ಕೆಲಸ ಮಾಡಲು ಆಕ್ಷೇಪಿಸುವ ಸಂಭವವು ಇಲ್ಲವೇ ಇಲ್ಲ.

ಕೊಡಗಿನಲ್ಲಿ ಆಡಳಿತದ ಅಧಿಕಾರಗಳನ್ನು ನ್ಯಾಯತೀರ್ಪಿನ ಅಧಿಕಾರಗಳಿಂದ ಬೇರ್ಪಡಿಸಬೇಕೆಂತ ಕೌನ್ಸಿಲಿನಲ್ಲಿ ತಾವಿದ್ದ ತರಾವು ಸೋತು ಹೋಯಿತು, ಈಗ ಕಮಿಶನರ ಮುಂದೆ ಹೋದ ಮಹನೀಯರು ಸೂಚಿಸಿದ ಸಲಹೆಯು ಕೌನ್ಸಿಲ್ ಮೂಲಕ ಬರದೆ ಸರಕಾರವು ಗಮನಕ್ಕೆ ತೆಗೆದುಕೊಳ್ಳಲು ಕಷ್ಟವಾಗುತ್ತದೆ ಎಂತ ಕಮಿಶನರು ಸೂಚಿಸಿದರಾಗಿ ತಿಳಿಯುತ್ತೇವೆ. ಕೌನ್ಸಿಲ್ ಮೂಲಕ ಸಲಹೆ ಬರಬೇಕಾದದ್ದು ಯುಕ್ತವೆಂತ ಒಪ್ಪುತ್ತೇವೆ. ಆದರೆ ಕೌನ್ಸಿಲಿನಲ್ಲಿ ಮಂಜೂರಾದ ತರಾವುಗಳನ್ನೆಲ್ಲಾ ಸರಕಾರವು ಈ ವರೆಗೆ ಜಾರಿಮಾಡಿದೆಯೋ? ಅಥವಾ ಅಧಿಕಾರಗಳಲ್ಲಿ ಬದಲಾವಣೆಗಳನ್ನು ಮಾಡುವಾಗಲೆಲ್ಲಾ ಕೌನ್ಸಿಲಿನ ಸಲಹೆ ತೆಗೆದುಕೊಂಡೇ ಸರಕಾರವು ಮುಂಜೂರು ಮಾಡಿದೆಯೋ ಎಂತ ಯೋಚಿಸಬೇಕಾಗಿದೆ. ಕೌನ್ಸಿಲಿನಲ್ಲಿ ಮಂಜೂರಾದ ತರಾವುಗಳಲ್ಲಿ ಶೇಕಡ ತೊಂಭತ್ತೊಂಭತ್ತರಷ್ಟನ್ನು ಸರಕಾರಕ್ಕೆ ಅಂಗೀಕಾರ ಮಾಡಲು ಸಾಧ್ಯವಾಗಲಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಈ ಸಂಗತಿ ದೇಶಕ್ಕೆ ತಿಳಿದೇನೇ ಇಂಥಾ ಕೌನ್ಸಿಲಿನಿಂದ ಏನೂ ಪ್ರಯೋಜನವಿಲ್ಲವೆಂತ ಜನವು ಆಗಿಂದಾಗ್ಯೆ ಹೇಳಿಕೊಳ್ಳುತ್ತಿರುವುದು.

ಹೊಸ ಅಧಿಕಾರಗಳನ್ನು ಏರ್ಪಡಿಸುವಾಗ ಅಥವ ಹೊಸ ಖರ್ಚನ್ನು ಮಾಡುವಾಗ ಕೌನ್ಸಿಲಿನ ಮಂಜೂರಾತಿ ಪಡೆಯುತ್ತಲೂ ಇಲ್ಲ. ಎಕ್ಸೈಸ್ಸ್ ಇನ್ಸ್‌ಪೆಕ್ಟರ ಅಧಿಕಾರವನ್ನು ಪುನಃ ಸ್ಥಾಪಿಸುವಾಗ ಕೌನ್ಸಿಲಿನ ಮಂಜೂರಾತಿಯನ್ನು ಮುಂದಾಗಿ ಪಡೆಯಲಿಲ್ಲ. ವೆಟರನರಿ ಇನ್ಸ್‌ಪೆಕ್ಟರ್ ಕೆಲಸವನ್ನು ಹೊಸಕಾಗಿ ಮಾಡಿದಾಗ ಕೌನ್ಸಿಲನ್ನು ಕೇಳಿದರೆಂತ ನಮಗೆ ತಿಳಿದುಬರಲಿಲ್ಲ. ಆದ್ದರಿಂದ ಸಂಕಾರಕ್ಕೆ ಅವಶ್ಯವೆಂತ ತೋರಿದಾಗ ಮೂರ್ವಾಡುಗಳನ್ನು ಸರಕಾರವು ತಾನಾಗಿಯೇ ಮಾಡುತ್ತದೆ.

ಈಗ ಸೂಚಿಸಿರುವ ಮೂರ್ವಾಡುಗಳಿಗೆ ದೇಶದ ಬೆಂಬಲ ವಿರುವಾಗ ಸರಕಾರವು ಕೌನ್ಸಿಲಿನ ಸಲಹೆ ಸಿಕ್ಕಲಿಲ್ಲವೆಂತ ತಡಮಾಡುವುದು ಯುಕ್ತವಲ್ಲ. ಕಳೆದ ವರ್ಷ ಕೌನ್ಸಿಲಿನಲ್ಲಿ ಬಂದ ತರಾವು ಸ್ವಲ್ಪವಾಗಿರಲಿಲ್ಲ. ಆಡಳಿತದ ಅಧಿಕಾರಗಳಿಂದ ನ್ಯಾಯತೀರ್ಪಿನ ಅಧಿಕಾರಂಗಗಳನ್ನೂ, ಸಾಧ್ಯವಾದಷ್ಟು ಹೆಚ್ಚು ಖರ್ಚಿಲ್ಲದೆ ಬೇರೆ ಮಾಡಬೇಕಾದದ್ದು ಅವಶ್ಯವೆಂಬದಕ್ಕೆ ಕೌನ್ಸಿಲಿನ ದೆಂಬಲವೇನೂ ಬೇಕಾಗಿಲ್ಲ. ಒಟ್ಟು ಪ್ರಪಂಚದಲ್ಲೂ ಇಂಡಿಯೂದೇಶದ ವ್ಯಾಂತ್ಯಗಳಲ್ಲೂ ಅಂಗೀಕೃತವಾದ ತತ್ವವೇ ಆಗಿದೆ ಅಲ್ಲದೆ ನಮ್ಮ ದೇಶದಲ್ಲಿ ಕ್ರಿಮಿನಲ್ ತಕ್ಕೀದುಗಳಲ್ಲಿ ನ್ಯಾಯಸ್ಥೆಸಲ್ ಮಾಡುವ ವೇಲಧಿಕಾರಿಯೂದ ಡಿಸ್ಟ್ರಿಕ್ಟ್ ವೇಜಿಸ್ಟ್ರೇಟರು ಬಹಳ ದೀರ್ಘಕಾಲ ಒಂದೇ ಕಡೆಯಲ್ಲಿ ಇರಬೇಕಾಗಿ ಬಂದದ್ದೂ ಅದರಿಂದ ಆಗುವ ದುಷ್ಪರಿಣಾಮಗಳೂ ದೇಶಕ್ಕೆಳಿದಿದೆ. ಅಂಥಾ ಸ್ಥಿತಿ ಇನ್ನಾದರೂ ಬರದಂತೆ ನೋಡಿಕೊಳ್ಳಬೇಕಾದದ್ದು ಸರಕಾರದ ಕರ್ತವ್ಯವಲ್ಲವೇ? ಕಮಿಶನರೇ ಡಿಸ್ಟ್ರಿಕ್ಟ್ ವೇಜಿಸ್ಟ್ರೇರಾದರೆ ಇವರು ಆಗಿಂದಾಗ್ಯೆ ಬದಲಾಗುತ್ತಿರುವುದು ದೇಶದವರ ಒಂದು ಮುಖ್ಯ ಕೋರಿಕೆಯು ನೆರವೇಂದಂತಾಗುತ್ತದೆ.

ಅಲ್ಲದೆ ಕೊಡಗಿಗೆ ಬರುವ ಕಮಿಶನರುಗಳು ಸಿವಿಲ್ ಖಾತೆಯಲ್ಲಿ ಏನೇನೂ ಪರಿಶ್ರಮವಿಲ್ಲದವರು. ಇವರು ಡಿಸ್ಟ್ರಿಕ್ಟ್ ಜಡ್ಜಿಯರಾಗಿ ಕೊಡಗಿನ ಸಿವಿಲ್ ಕೋರ್ಟುಗಳ ಮೇಲ್ವಿಚಾರಣೆ ಮಾಡುವವರಾಗಿದ್ದಾರೆ. ಅಪ್ಪೀಲ್ ಅಧಿಕಾರಿಯೂ ಆಗಿದ್ದಾರೆ. ಇಂಥಾ ಅಧಿಕಾರವು ಮಲಬಾರಿನ ಡಿಸ್ಟ್ರಿಕ್ಟ್ ಜಡ್ಜಿಯರಂಥ ಅನುಭವಸ್ಥರಿಗೆ ಹೋದರೆ ದೇಶಕ್ಕೆ ಎಷ್ಟೋ ಕ್ಷೇಮವಾದೀತು.

ಅಲ್ಲದೆ ದಕ್ಷಿಣ ಕೊಡಗಿನ ಕಕ್ಷಿಗಾರರಿಗೆ ಅಪ್ಪೀಲ್ ಕೋರ್ಟು ಸಬ್‌ಜಡ್ಜಿ ಕೋರ್ಟೂ ಉತ್ತರ ಕೊಡಗಿನ ಕಕ್ಷಿಗಾರರಿಗೆ ಅಪ್ಪೀಲ್ ಕೋರ್ಟು ಕಮಿಶನರೂ ಆಗಿದ್ದಾರೆ. ಇದು ಅಷ್ಟು ಒಳ್ಳೇ ಕ್ರಮವಲ್ಲ. ಮಲಬಾರಿನ ಡಿಸ್ಟ್ರಿಕ್ಟ್ ಜಡ್ಜಿಯರು ಕೊಡಗಿನ ಡಿಸ್ಟ್ರಿಕ್ಟ್ ಜಡ್ಜಿಯರಾದರೆ ಕೊಡಗಿನ ಎರಡು ಸಿವಿಲ್ ಕೋರ್ಟುಗಳಿಂದಲೂ ಅನುಭವಸ್ಥ ಜಡ್ಜಿಯರಾದ ಡಿಸ್ಟ್ರಿಕ್ಟ್ ಜಡ್ಜಿಯರ ಕೋರ್ಟಿನಲ್ಲೇ ಅಪ್ಪೀಲ್ ವಿಚಾರಣೆಗಳನ್ನೆಲ್ಲಾ ಇಟ್ಟುಕೊಳ್ಳಬಹುದು. ಹೊಂಗಿನಿಂದ ಡಿಸ್ಟ್ರಿಕ್ಟ್ ಜಡ್ಜಿಯರನ್ನು ತರಿಸುವ ಏರ್ಪಾಡು ಜಯಪ್ರದವಾದರೆ ಮಡಿಕೇರಿಯಲ್ಲೂ ಸಹ ಮುನ್ಸಿಫ್ ಕೋರ್ಟೇ ಮಾಡುವ ಯೋಚನೆ ಸಹ ಮಾಡಬಹುದು.

ಈಗಿನ ಡಿಸ್ಟ್ರಿಕ್ಟ್ ವೇಜಿಸ್ಟ್ರೇಟರು ಕೆಲಸದಿಂದ ನಿವೃತ್ತರಾದಾಗಲೇ ಈ ಏರ್ಪಾಡು ಮಾಡಬೇಕೆಂತ ಸೂಚನೆಯಾಗಿದೆ. ಇವರ ಬದಲಿಗೆ ಇನ್ನೊಬ್ಬರನ್ನು ನೇಮಿಸಿದರೂ ಸಹ ಈ ಸಲಹೆಗಳನ್ನು ಜಾರಿಗೆ ತರಲು ಅಡ್ಡಿಯಿಲ್ಲವೆಂತ ಕಮಿಶನರು ಹೇಳಿದರಂತೆ. ಕಮಿಶನರು ಏನೇ ಹೇಳಿದ್ದರೂ ಡಿಸ್ಟ್ರಿಕ್ಟ್ ವೇಜಿಸ್ಟ್ರೇಟರ ಸ್ಥಳವು ಖಾಯಮಾಗಿ ಖಾಲಿಜೀಳುವಾಗ ಅವರ ಬದಲಿಗೆ ಹಂಗಾಮಿಯಾಗಿ ಇನ್ನೊಬ್ಬರನ್ನು ನೇಮಿಸಿ ಈ ಬದಲಾವಣೆಗಳನ್ನು ಮಾಡುವ ಬದಲು ಈ ಬದಲಾವಣೆಗಳನ್ನು ಈಗಿನ ಡಿಸ್ಟ್ರಿಕ್ಟ್ ವೇಜಿಸ್ಟ್ರೇಟರು ಕೆಲಸದಿಂದ ನಿವೃತ್ತರಾಗುವಾಗಲೇ ಜಾರಿಗೆ ತರಬೇಕಾದದ್ದು ಯುಕ್ತವಾಗಿದೆವ ತ್ತು ಅವಶ್ಯವಾಗಿದೆ.

ಸೆಂಟ್ರಲ್ ಕೋ ಆಪರೇಟಿವ್ ಫೆಡರೇಶನ್

ಕೊಡಗಿನಲ್ಲಿ ಸಹಕಾರಿ ಸಂಘಗಳ ಮೇಲ್ವಿಚಾರಣೆಗೆ ಯೂನಿಯನ್‌ಗಳೂ, ಯೂನಿಯನ್ ಪ್ರತಿನಿಧಿಗಳಿಂದ ಕೂಡಿದ ಫೆಡರೇಶನ್ ಸಹ ಕೆಲಸ ಮಾಡುತ್ತಲಿವೆ. ಈಗ ಫೆಡರೇಶನನ್ನು ತೆಗೆದು ಹಾಕಿ ಫೆಡರೇಶನಿನ ಕೆಲಸವನ್ನು ಸೆಂಟ್ರಲ್ ಬ್ಯಾಂಕೇ ತೆಗೆದುಕೊಳ್ಳುವ ಬಗ್ಯೆ ಸೆಂಟ್ರಲ್ ಬ್ಯಾಂಕಿನ ಬೈಲಾಗಳನ್ನು ತಿದ್ದು ಪಡಿ ಮಾಡುವ ಸಲಹೆಯು ಈ ತಿಂಗಳ ಆಖೈರಿನಲ್ಲಿ ನಡೆಯಲಿಕ್ಕಿರುವ ಸೆಂಟ್ರಲ್ ಬ್ಯಾಂಕಿನ ಜನರಲ್ ವಿಂಟಿಂಗಿನಲ್ಲಿ ಜರ್ಜೆಗೆ ಬರುತ್ತದೆಯೆಂತ ತಿಳಿಯುತ್ತೇವೆ. ಫೆಡರೇಶನ್ ಮಾಡುವ ಮೇಲ್ವಿಚಾರಣೆ ಮತ್ತು ಪ್ರಚಾರದ ಕೆಲಸವನ್ನು ಸೆಂಟ್ರಲ್ ಬ್ಯಾಂಕಿನ ಒಂದು ಉಪ ಕಮಿಟಿಯು ನಡೆಯಿಸುವ ಅಭಿಪ್ರಾಯವಿದೆ. ಈ ತರವ ಏರ್ಪಾಡು ಮದ್ರಾಸಿನ ಕೆಲವು ಕಡೆಗಳಲ್ಲಿ ಜಾರಿಗೆ ಬಂದಿದೆಯಂತೆ.

ಉದ್ಯೋಗಸ್ಥರಲ್ಲದ ಇತಕಷ್ಟು ಸಹಕಾರಿಗಳು ಕೆಲಸ ಮಾಡಲು ಮುಂದೆ ಬರದೆ ಇರುವುದು ಈ ಮೂರ್ವಾಡಿಗೆ ಒಂದು ಕಾರಣವೆಂತ ತಿಳಿಯುತ್ತೇವೆ. ಫೆಡರೇಶನಿನ ಆಡಳಿತ ಮಂಡಳಿಯ ಸದಸ್ಯರೂ ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರೂ ಬೇರೆ ಬೇರೆ ಅಲ್ಲದೆ ಇದರ ಆಡಳಿತ ನಡಿಸುವವರೇ ಅದರ ಆಡಳಿತ ನಡೆಸುವವರೂ ಆಗಿದ್ದಾರೆಂತ ತಿಳಿಯುತ್ತೇವೆ. ಹೀಗಾಗಿರುವುದರಿಂದ ಬೇರೆ ಬೇರೆ ಸಂಸ್ಥೆಗಳನ್ನು ಹೆಸರಿಗೆ ಮಾತ್ರ ಇಟ್ಟುಕೊಳ್ಳುವುದರಿಂದ ಪ್ರಯೋಜನವಿಲ್ಲವೆಂತ ಒಪ್ಪಬಹುದು. ಹೀಗೆ ಸಹಕಾರಿ ಕಾರ್ಯ ಕಲಾಪಗಳು ಜನಪ್ರಿಯವಾಗಿರದೆ ಇರಲು ಕಾರಣವೇನು? ದೇಶೀಯರಲ್ಲಿ ಸಹಕಾರಿ ಚಳವಳಿದಲ್ಲಿ ಅಭಿರುಚಿ ಇಲ್ಲದಿರುವುದೋ ಅಥವಾ ಬೇರೆ ಕಾರಣಗಳು ಇವೆಯೋ ತಿಳಿಯದು. ಅಂತೂ ಈಗ ಅಧಿಕಾರದಲ್ಲಿರುವ ರಿಜಿಸ್ಟ್ರಾರವರು ಆ ಕೆಲಸಕ್ಕೆ ಬಂದಂದಿನಿಂದಲೂ ಫೆಡರೇಶನಿನಿಂದ ಅವಶ್ಯವಿಲ್ಲವೆಂತಲೇ ಅಭಿಪ್ರಾಯವುಳ್ಳವರಾಗಿದ್ದಾರೆ. ಅವರ ಅಭಿಪ್ರಾಯಕ್ಕೆ ಸರಿಯಾಗಿ ಫೆಡರೇಶನನ್ನು ಪ್ರತ್ಯೇಕವಾಗಿಯೇ ಇಟ್ಟುಕೊಳ್ಳಬೇಕೆಂತ ಅನ್ನುವ ಜನರೇ ಇಲ್ಲವಾಗಿದೆ.

ಬ್ಯಾಂಕಿನ ಆಡಳಿತ ಮಂಡಲಿಯು ಆರಿಸುವ ಒಂದು ಉಪಕಮಿಟಿಯಿಂದ ಮೇಲ್ವಿಚಾರಣೆಯು ಎಲ್ಲಾ ಕೆಲಸಗಳು ನಡಸಲ್ಪಡಬೇಕೆಂತ ಬ್ಯಾಂಕಿನ ಬೈಲಾ ತಿದ್ದುಪಡಿಯಾಗಲಿಕ್ಕಿದೆ. ಮೇಲ್ವಿಚಾರದ ಮತ್ತು ಪ್ರಚಾರದ ಕೆಲಸಗಳನ್ನೆಲ್ಲಾ ಬ್ಯಾಂಕಿನ ಉಪಕಮಿಟಿಯು ತೆಗೆದುಕೊಂಡರೆ ಬ್ಯಾಂಕಿನ ದೃಷ್ಟಿಯು ಬ್ಯಾಂಕಿಗೆ ಸೇರಿದ ಸಂಘಗಳಿಗೆ ಹಣವನ್ನು ಒದಗಿಸಿಕೊಟ್ಟು ಹಾಗೆ ಒದಗಿಸಿಕೊಡುವ ಹಣದ ಭದ್ರತೆಯನ್ನು ನೋಡಿಕೊಳ್ಳುವ ಮುಖ್ಯ ಉದ್ದೇಶವು ಹಿಂದೆ ಬಿದ್ದು ಪ್ರಚಾರದ ವೇಲೆ ಮನಸಾದರೆ ಬ್ಯಾಂಕಿನ ವೇಲೆ ನಂಬಿಕೆ ಇಟ್ಟು ಬ್ಯಾಂಕಿನಲ್ಲಿ ಹಣ ಇಡುವಂಗೆ ನಂಬಿಕೆ ಕಡಿಮೆ ಆದೀತೋ ಎಂತ ನೋಡಿಕೊಳ್ಳಬೇಕಾಗಿದೆ.

ಇನ್ನೊಂದು ಕೊರತೆ ಬಂದೊದಗುವ ಸಂಭವವೂ ಇದೆ. ಬ್ಯಾಂಕಿನ ಮುಖ್ಯ ಕೆಲಸವಾದ ಪತ್ತನ್ನು ಒದಗಿಸಿ ಕೊಡುವದಲ್ಲೇ ಬ್ಯಾಂಕು ಮಗ್ನವಾಗಿ ಮೇಲ್ವಿಚಾರದ ಮತ್ತು ಪ್ರಚಾರದ ಕಾರ್ಯವು ಹಿಂದೆ ಬೀಳುವ ಸಂಭವವೂ ಇದೆ. ಇಂಥಾ ಕೊರತೆಗಳು ಪ್ರಬಲವಾಗದಂತೆ ನೋಡಿಕೊಳ್ಳಬೇಕಾಗಿದೆ

ಮೇಲ್ವಿಚಾರದ ಕಾರ್ಯವು ವೂರ್ತಿಯಾಗಿ ಬ್ಯಾಂಕಿಗೇ ಬರುವುದಾದರೆ ಬ್ಯಾಂಕಿಗೆ ಸೇರದೆ ಇರುವ ಸಂಘಗಳ ಪ್ರತಿನಿಧಿಗಳಿಲ್ಲದ ಕೂಟದಿಂದ ಅಂಥಾ ಸಂಘಗಳ ಮೇಲ್ವಿಚಾರಣೆ ಆಗಬೇಕಾಗುತ್ತದೆ. ಬ್ಯಾಂಕಿನ ಮೆಂಬರುಗಳಿಂದ ಮಾತ್ರ ಆರಿಸಲ್ಪಡುವ ಆಡಳಿತ ಮಂಡಳಿಯಿಂದ ಬ್ಯಾಂಕಿನ ಮೆಂಬರಾಗದ ಸಂಘಗಳ ಮೇಲ್ವಿಚಾರವಾಗುವುದು ಸಹಕಾರಿ ತತ್ವಕ್ಕೆ ಅನುಗುಣವಾಗಲಿಲ್ಲ. ಬ್ಯಾಂಕಿನಿಂದ ಆರಿಸಲ್ಪಡುವ ಮೇಲ್ವಿಚಾರದ ಉಪಕಮಿಟಿಗೆ ದೇಶದ ಯೂನಿಯನ್‌ಗಳ ಪ್ರತಿನಿಧಿಗಳು ಸೇರಿದರೆ ಈ ಲೋಪವು ಹೋದೀತು. ಇದನ್ನು ಹೇಗೆ ಕಾರ್ಯ ರೂಪಕ್ಕೆ ತರಬೇಕೆಂಬದನ್ನು ಸಹಕಾರಿಗಳು ಯೋಚಿಸಬೇಕು.

ತಿದ್ದುಪಡಿಗೆ ಸೂಚನೆ ಬಂದಿರುವ ಬೈಲಾಗಳಲ್ಲಿ ಸುಪರ್ ವೈಜರುಗಳನ್ನು ನೇಮಿಸುವುದು, ತೆಗೆಯುವುದು ಮತ್ತು ಬಡ್ಡಿಟ್ಟನ್ನು ಮಂಜೂರು ಮಾಡುವುದು ವಗೈರೆ ಹಕ್ಕುಗಳು ರಿಜಿಸ್ಟ್ರಾರರ ಮಂಜೂರಾತಿಗೆ ಒಳಪಟ್ಟು ಇಟ್ಟಿದೆ. ಇದು ಅನಾವಶ್ಯವೆಂತ ನನಗೆ ತೋರುತ್ತದೆ. ಸಹಕಾರಿ ಚಳವಳಿವನ್ನು ಸಾಧ್ಯವಾದ ಮಟ್ಟಿಗೆ ಸರಕಾರಿ ಹಿಡಿತದಿಂದ ಜನರಿಗೆಂನೇ ಒಪ್ಪಿಸಬೆ ಕೆಂಬದೇ ಉದ್ದೇಶವೆಂತ ಇರುವಾಗ ಈ ರೀತಿ ಸಹಕಾರಿ ಚಳವಳಿದ ಒಳಗಿನ ಆಡಳಿತದಲ್ಲೂ ರಿಜಿಸ್ಟ್ರಾರರು ಕೈ ಹಾಕುವ ಹಕ್ಕು ಇಟ್ಟುಕೊಳ್ಳುವುದು ಯುಕ್ತವಲ್ಲ. ದೇಶೋದ್ಧಾರದ ದೃಷ್ಟಿಯಿಂದ ಕೆಲಸ ಮಾಡುವ ಉದ್ಯೋಗಸ್ಥರಲ್ಲದ ಜನರಲ್ಲಿ ರಿಜಿಸ್ಟ್ರಾರರು ಈ ರೀತಿ ಅಪನಂಬಿಕೆ ಇಡುವುದು ಸರಿಯಲ್ಲ. ಸುಪರ್‌ವೈಜರುಗಳನ್ನು ನೇಮಿಸುವುದು ತೆಗೆಯುವುದು ಶಿಕ್ಷಿಸುವುದು ಇಂಥಾ ಕೆಲಸಗಳಲ್ಲಿ ಸಹ ಉದ್ಯೋಗಸ್ಥರಲ್ಲದವರು ಸಹಕಾರಿ ಚಳವಳಿದ ಹಿತದಿಂದಲ್ಲದೆ ಬೇರೆ ಉದ್ದೇಶದಿಂದ ಕೆಲಸ ಮಾಡಿಯಾರೆಂತ ರಿಜಿಸ್ಟ್ರಾರರು ಯಾಕೆ ಯೋಚಿಸಬೇಕು? ಈ ತರ ಅಪನಂಬಿಕೆ ಇಟ್ಟರೆ ಗೌರವವಿರುವ ಮಹನೀಯರು ಸಹಕಾರದಲ್ಲಿ ಕೆಲಸ ಮಾಡಲು ಹಿಂಜರಿಯುವ ಸಂಭವವಿದೆ. ಸಹಕಾರಿ ಚಳವಳಿವನ್ನು ದುರುಪಯೋಗ ಮಾಡಿಕೊಳ್ಳುತ್ತಾರೆಂತ ಕಂಡಾಗ ಮಾತ್ರ ರಿಜಿಸ್ಟ್ರಾರರು ಕೈ ಹಾಕಿದರೆ ಸಾಕಾಗಿದೆ. ಬೈಲಾವನ್ನು ಮಂಜೂರು ಮಾಡಿಕೊಳ್ಳುವಾಗ ಈ ವಿಷಯಗಳನ್ನು ಜನರಲ್ ವಿಂಟಿಂಗಿನ ಮಹಾಸಭೆಯು ಯೋಚಿಸಬೇಕಾಗಿದೆ.

ಸೆಂಟ್ರಲ್ ಬ್ಯಾಂಕಿಗೆ ಅಧಿಕಾರ ಸಿಕ್ಕುವ ದಾಡ್ಡರಿಂದ ಮೇಲ್ವಿಚಾರದ ಕೆಲಸವನ್ನು ಬ್ಯಾಂಕಿಗೆ ವಹಿಸಿಕೊಳ್ಳುವ ಬೈಲಾಗಳನ್ನು ಬ್ಯಾಂಕಿನ ಮಹಾ ಸಭೆಯು ಮಂಜೂರು ಮಾಡಿಕೊಳ್ಳುವುದು ಕಷ್ಟವಾಗಲಾರದು. ಬ್ಯಾಂಕು ಬೈಲಾಗಳನ್ನು ಅಂಗೀಕರಿಸಿಕೊಂಡರೂ ಫೆಡರೇಶನನ್ನು ಒಡೆದು ಮೇಲ್ವಿಚಾರದ ಕೆಲಸವನ್ನೆಲ್ಲಾ ಬ್ಯಾಂಕಿಗೆ ಕೊಡಬೇಕೋ ಎಂಬುವುದನ್ನು ದೇಶದಲ್ಲಿ ಸಹಕಾರದಲ್ಲಿ ಅಭಿರುಚಿ ಇರುವವರೆಲ್ಲರೂ ಸೇರಿ ಯೋಚಿಸಬೇಕಾದ ಸಂಗತಿಯಾಗಿದೆ ಈ ಬಗ್ಯೆ ದೇಶದ ಎಲ್ಲಾ ಸಹಕಾರಿಗಳನ್ನು ಕರೆಸಿ ಒಂದು ಕಾನ್ ಫರೆನ್ಸಿನಲ್ಲಿ ತೀರ್ಮಾನಿಸಿಕೊಳ್ಳಬೇಕಾಗಿದೆ.

ಸುಬ್ಬರಾಯನರ ಮುಸೂದೆಯ ಗತಿ.

ಅಸ್ಪೃಶ್ಯರೆಂಬವರಿಗೆ ಇಂಡಿಯದ ದೇವಾಲಯಗಳಲ್ಲಿ ಪ್ರವೇಶವು ಸಿಗುವಂತೆ ಕಾನೂನಿನ ಮಂತ್ರದಿಂದ ಸಿದ್ಧಿಗೊಳಿಸಬೇಕೆಂದು ಶ್ರೀ. ರಂಗ ಅಯ್ಯರು ದಿಲ್ಲಿಯಲ್ಲಿ ಡಾ. ಸುಬ್ರಾಯನರವರು ಮದ್ರಾಸಿನಲ್ಲಿ ಜಪಿಸುತ್ತಿದ್ದರು. ಆ ಒಂದೇ ಮಂತ್ರವನ್ನು ಜಪಿಸಲಿಕ್ಕೆ ಶ್ರೀ. ರಂಗ ಅಯ್ಯರವರಿಗೆ ಅಪ್ಪಣೆ, ಶ್ರೀ. ಸುಬ್ರಾಯನರವರಿಗೆ ತಡೆ ಇದೆರಡೂ 'ಕರ್ತುನು ಕರ್ತುಂ' ಇದ್ರಾರಾದ ವೈಸರಾಯರವರಿಂದ ಒಂದೇ ಸಮಯದಲ್ಲಿ ನಡೆಯಿತು. ಇದಕ್ಕೂ ಕಾರಣವುಂಟು. ಏನದು? "ದೇವಸ್ಥಾನದಲ್ಲಿ ಅಸ್ಪೃಶ್ಯರಿಗೆ ಪ್ರವೇಶ ಕೊಡುವುದೆಂದರೆ ಪ್ರಾಂತಿಕ ಸರಕಾರಕ್ಕೆ ಸಂಬಂಧಿಸಿದ ವಿಷಯವೇ ಅಲ್ಲ. ಅದು ಇಡೀ ಇಂಡಿಯದ ಮತಸಂಬಂಧವಾದ ಪ್ರಶ್ನೆ. ಅದರಿಂದ ಅದರ ಇತ್ಯರ್ಥವು ವರಿಷ್ಠ ಕಾಯದೆ ಮಂಡಲದಲ್ಲೆ ನಡೆಯಬೇಕು" ಎಂಬುದು ವೈಸರಾಯರ ನಿರ್ಧಾರ. ಎಷ್ಟು ಅಂದವಾಗಿ ತೋರುತ್ತದೆ ನಿರ್ಧಾರವು! ಆದರೆ, ನಮ್ಮ ಮದ್ರಾಸಿನಲ್ಲಿ ಮಾತ್ರವೆ "ರಲಿಜಸ್ ಎಂಡೌಮೆಂಟಿನ ಬಿಲ್ಲು' ಕಾನೂನಿನ ಮೂಲಕ ಜಾರಿಗೆ ತರಲ್ಪಟ್ಟಿಕಲ್ಲವೆ? ಅದು ಇಡಿ ಇಂಡಿಯದ ಮತಸಂಬಂಧವಾದ ಪ್ರಶ್ನೆಯಲ್ಲಿ ಸೇರಿದುದಲ್ಲವೆ? ಹಾಗೆಯಾರು ಕೇಳುತ್ತಾರೆ? ಕೇಳಿದರೂ ಕಳೆದು ಹೋದುದಕ್ಕೆನ್ನೇನು ಪೂಡುವುದು? ಎಂದಲ್ಲವೆ ಉತ್ತರವು. ಇರಲಿ; ಇದರಿಂದ ಸರಕಾರದ ಅಭಿಪ್ರಾಯ ವುಹೇಗೆಯೂ ತೋರುತ್ತದೆ ಎಂದು ನಮ್ಮೆಣಿಕೆ. ಶ್ರೀ. ರಂಗ ಅಯ್ಯರ ಮುಸೂದೆಯ ಫಲವನ್ನು ಈಗಲೆ ಪರೀಕ್ಷಿಸುವ ಪ್ರಯತ್ನವನ್ನು ನಾವು ಮಾಡುವುದಿಲ್ಲ. ಅಂತೂ, ಹರಿಜನರ ದೇವಾಲಯ ಪ್ರವೇಶ ವಿಷಯದಲ್ಲಿ ಹೆಚ್ಚಿನ ತೊಡಕಿರುವುದು ದಕ್ಷಿಣ ದೇಶದಲ್ಲಿ; ಆ ಪ್ರಾಂತಿಕ ನ್ಯಾಯವಿಧಾಯಕ ಸಭೆಯಲ್ಲಿ ಆ ಮುಸೂದೆ ಬರತಕ್ಕದ್ದಿತ್ತು; ಅದನ್ನೆ ವೈಸರಾಯರವರು ತಡೆದರು. ಎಂದಿಷ್ಟೆ ಪ್ರಕೃತ ಹೇಳುತ್ತೇವೆ. ಈ ಸಂದರ್ಭದಲ್ಲಿ ಸವರ್ಣಾತನಿಗಳೆನ್ನುವ ಕೆಲವರು "ಹಾ! ನೋಡಿರಿ ನಮ್ಮ ತಪಸ್ಸಿನ ಫಲವನ್ನು!" ಎಂದು ತತ್ಕಾಲದ ಮಟ್ಟಿಗೆ ಹಿಗ್ಗಬಹುದು. ಆದರೆ ನಿಜವಾದ ಸುಧಾರಕರ ವರ್ಗದಲ್ಲಿ ಇಂಥ ವಿಷ್ಟೆಗಳಿಲ್ಲ. ಗಾಳಿಯು ಹತ್ತಿಯುಗವುನೆಂಬುದನ್ನು ಮರೆಯಬಾರದು.

ತೃತೀಯ ಚಕ್ರಗೋಷ್ಠಿಯ ಫಲಿತಾಂಶಗಳು.

ಹಿಂದಿನ ಸಮೂವೇಶಗಳಿಗಿಂತ ಮೂರನೆಯ ಚಕ್ರಗೋಷ್ಠಿ ಸಮೂವೇಶದಲ್ಲಿ ಒಂದು ನೂತನ ವಾತಾವರಣವನ್ನು ಭಾರತೀಯ ಪ್ರತಿನಿಧಿಗಳು ಕಂಡರೆಂಬುದು ನಿಜ. ದ್ವಿತೀಯ ಚಕ್ರಗೋಷ್ಠಿಯ ಕಾಲದಲ್ಲಿ ನೂತನ ಬ್ರಿಟಿಷ್ ಪ್ರಭುತ್ವವು ಅಗ ತಾನೆ ಏರ್ಪಾಟಾಗಿದ್ದ ಇನ್ನೂ ಚೆನ್ನಾಗಿ ಕುದುರಿರಲಿಲ್ಲ. ಅವರೊಡನೆ ವ್ಯವಹಾರವನ್ನು ಜರುಗಿಸುವುದು ತುಂಬಾ ಕಷ್ಟವಾಗಿತ್ತು. ಅವರವರಲ್ಲಿಯೆ ಇನ್ನೂ ಯಾವುಹೊಂದೂ ನಿರ್ಣೀತ ಏರ್ಪಾಟಾವು ಇರಲಿಲ್ಲ. ಸಾಂಘಿಕ ಪ್ರಶ್ನೆಯು ಅದನ್ನು ಮತ್ತಷ್ಟು ಕ್ಲಿಷ್ಟವನ್ನಾಗಿ ಮಾಡಿತ್ತು. ಅದನ್ನು ಪರಿಷ್ಕರಿಸಲು ಗಾಂಧಿಜಿಯವರ ನಾಯಕತ್ವದಲ್ಲಿ ಮಾಡಿದ ಪ್ರಯತ್ನಗಳು ವಿಫಲವಾದವು ಕೊನೆಗೆ ಪ್ರತಿನಿಧಿಗಳು ಆತ್ಮ ವಿಶ್ವಾಸವನ್ನೂ, ಇತರರಲ್ಲಿ ನಂಬಿಕೆಯನ್ನೂ ಎರಡನ್ನೂ ಹಾಳುಮಾಡಿಕೊಂಡರು.

ಈಗಲೆಂದರೊ, ವಾತಾವರಣವು ಬದಲಾಯಿಸಿತ್ತು. ಅವರು ಮುಖ್ಯ ಸಮಸ್ಯೆಗಳನ್ನು ಚರ್ಚಿಸಿದರು. ವಿವರಯತವಾದ ಕಾರ್ಯಕ್ರಮವು ಅವರಿಗೆ ತಿಳಿಸಲಾಯಿತು.

ಕಾರ್ಯಕ್ರಮ ವಿಷಯವಾಗಿ ಈ ದೇಶದಲ್ಲಿ ವಾಗ್ವಾದನಗಳು ಜರುಗಿದ್ದವು. ಇಂಡಿಯೂ ಮಂತ್ರಿಯು ಮಾಡಿದ್ದ ಕಾರ್ಯಕ್ರಮ ಪ್ರಕಟಣೆಯಲ್ಲಿ ಬದಲಾವಣೆಗಳಿಗೆ ಅವಕಾಶವಿದ್ದೇ ಇದ್ದಿತು.

ಸ್ಪಷ್ಟವಾದ ರೂಪವಿಲ್ಲದ ಕಾರ್ಯಕ್ರಮವು ಈಗ ಸ್ಪಷ್ಟ ರೂಪವನ್ನು ತಾಳಿತು. ಮತ್ತು ಹಿಂದೂ ಪ್ರತಿನಿಧಿಗಳ ಸೂಚನೆಯು ಅನುಮೋದಿಸಲ್ಪಟ್ಟು, ಸೈನಿಕ ಸಮಸ್ಯೆಯೆ ಮೊದಲಾದವು ವಿವರವಾಗಿ ಚರ್ಚಿಸಲ್ಪಟ್ಟವು. ಹಿಂದಿನ ಸಮೂವೇಶಗಳಲ್ಲಿ ಅಸಂಪೂರ್ಣವಾಗಿ ಚರ್ಚಿಸಲ್ಪಟ್ಟಿದ್ದ ವಿಷಯಗಳನ್ನ ಈಗ ಚರ್ಚಿಸಿದರು.

ಇಂಡಿಯೂ ಮಂತ್ರಿಯು ಸಮೂವೇಶವು ಸೇರಿದ ಕೆಲವು ದಿನಗಳಾದ ಮೇಲೆ ಒಂದು ಪ್ರಕಟಣೆಯನ್ನು ಹೊರಡಿಸಿದನು. ಆದರೆ ಆ ಪ್ರಕಟಣೆಯನ್ನೆ ಕೊನೆಯ ಮಾತನ್ನಾಗಿ ಭಾವಿಸಲಿಲ್ಲ. ಈ ಸಂದರ್ಭದಲ್ಲಿ ಲಾರ್ಡ್ ಇರ್ವಿನ್‌ರವರು ಆಗ್ಗೋ ಯರಿಗೂ, ಹಿಂದೂಗಳಿಗೂ ಸಾಮರಸ್ಯವನ್ನುಂಟುಮಾಡಿದರು

ಮಹಮ್ಮದೀಯರ ಐಕಮತ್ಯ.

ಸಮೂವೇಶದಲ್ಲಿ ಹಿಂದೂ ಪ್ರತಿನಿಧಿಗಳೊಡನೆ ಮಹಮ್ಮದೀಯರೂ, ಪಂಸ್ಪರವಾಗಿ ತಮ್ಮಲ್ಲಿ ಭೇದಗಳಿದ್ದಾಗ್ಯೂ ಇತರರಲ್ಲಿ ಮಾತನಾಡುವಾಗ ಸ್ಥಿರವಾದ ಅಭಿಪ್ರಾಯಗಳೊಡನೆ ಐಕಮತ್ಯತೆಯಿಂದ ವರ್ತಿಸುತ್ತಿದ್ದರು.

ಐರೋಪಿಯನ್ನರು, ಆಂಗ್ಲೋ ಇಂಡಿಯನ್ನರು ಒಂದು ಪ್ರತ್ಯೇಕ ವರ್ಗವಾಗಿದ್ದರು. ಸರ್ ಫಾತ್ರೊರವರು ಪ್ರತ್ಯೇಕ ಕಾಳಿಪತ್ಯಾಯಗಳನ್ನುಂಟಾಗಿ ತಾವು ಮಾತ್ರ ಬೇರೆ ಇದ್ದರು. ಮಿಕ್ಕವರಲ್ಲಿ ಅತ್ಯಧಿಕ ಸಂಖ್ಯಾಕರೆಲ್ಲರೂ ಹಿಂದೂ ವರ್ಗವೆಂಬ ವಮ್ಯಹಾರ ನಾಮದಲ್ಲಿ ರಾಜಕೀಯ ವೇತ್ಯನಾದ ಸಪ್ರೂರವರ ನಾಯಕತ್ವದಲ್ಲಿ ರಾಯಭಾರವನ್ನು ಜರುಗಿಸಿದರು.

ಬ್ರಿಟಿಷ್ ಪ್ರಭುತ್ವದವರ ಕೋಮುವಾರು ಪ್ರಶ್ನಾ ಪರಿಹಾರದಿಂದ ಪ್ರತಿನಿಧಿಗಳ ಕೆಲಸವು ಬಹಳ ಸುಲಭವಾಯಿತು.

ಸಂಸ್ಥಾನಾಧೀಶ್ವರರ ದೀರ್ಘೋಪನ್ಯಾಸಗಳಿಲ್ಲ.

ಸಂಸ್ಥಾನಗಳ ತಂಡಿನಲ್ಲಿ ಮಂತ್ರಿಗಳು ಒಂದಿದ್ದರು. ತತ್ಫಲಿತವಾಗಿ ಈ ಬಾರಿ ದೀರ್ಘೋಪನ್ಯಾಸಗಳು ಇಲ್ಲದಿದ್ದಾಗ್ಯೂ ಮಂತ್ರಿಗಳು ಮುಖ್ಯ ವಿಷಯಗಳಲ್ಲಿ ತಮ್ಮ ಅರಸರ ಅನುಮತಿಯನ್ನು ಪಡೆಯುಬೇಕಾದ್ದರಿಂದ ಕೆಲವು ಸಮಸ್ಯೆಗಳನ್ನು ಪರಿಷ್ಕರಿಸಲಾಗಲಿಲ್ಲ.

ಚರ್ಚಿಸಲ್ಪಟ್ಟ ಅಂಶಗಳು.

ವೋಟು:—ಸಮೂವೇಶದಲ್ಲಿ ಈ ಸಾರಿ ಚರ್ಚಿಸಿದ ವಿಷಯಗಳಲ್ಲಿ ವೋಟುಕೊಡುವ ಹಕ್ಕು ಒಂದು. ಲೋಥಿಯನ್ ಕಮಿಟಿಯವರ ಶಿಫಾರಸುಗಳು ಪೂರ್ತಿಯಾಗಿ ಅನೋದಿಸಲ್ಪಟ್ಟವು.

ಹಿಂದೂಗಳಿಗೂ, ಮಹಮ್ಮದೀಯರಿಗೂ ಮಧ್ಯೆ ಅಂಗೀಕಾರವು ಕುದುರಿದ ವಿಷಯಗಳಲ್ಲಿ ಬ್ರಿಟಿಷ್ ಪ್ರತಿನಿಧಿಗಳು ತಮಗೆ ತಿಳಿಯದೆಂದರು. ಈಗ ಅನುಮೋದಿಸಲ್ಪಟ್ಟಿರುವ ಹಕ್ಕಿಗಿಂತ ಸಂಕುಚಿತವಾದ ಹಕ್ಕನ್ನೆ ಬ್ರಿಟಿಷ್ ಶಾಸನಾದಿಗಳು ವಾಂಛಿಸುತ್ತಾರಾದಾಗ್ಯೂ ಬ್ರಿಟಿಷ್ ಇಂಡಿಯೂ ಪ್ರತಿನಿಧಿಗಳು ಬಹಳ ವಿಷಯಗಳಲ್ಲಿ ಐಕಮತ್ಯವುಂಟಾಗಿರುವ ಕಾರಣ ಇವರ ಇಷ್ಟವು ನಂವೇರಲಿಲ್ಲ. ಕೇಂದ್ರ ಶಾಸನಸಭೆಗಳಲ್ಲಿ ಸಭ್ಯರ ಸಂಖ್ಯೆಯನ್ನು ನಿರ್ಣಯಿಸುವ ವಿಷಯಗಳಲ್ಲಿ ಭೇದಾಭಿಪ್ರಾಯವು ಪ್ರಬಲವಾಗಿತ್ತು. ಸಂಸ್ಥಾನ ಪ್ರತಿನಿಧಿಗಳಲ್ಲಿ ಚಿಕ್ಕ ಸಂಸ್ಥಾನಗಳ ಪ್ರತಿನಿಧಿಗಳು ಹೆಚ್ಚು ಸಂಖ್ಯೆಯನ್ನು ದೊಡ್ಡ ಸಂಸ್ಥಾನಗಳವರು ಕೊಂಚ ಸಂಖ್ಯೆಯನ್ನೂ ಕೋರುತ್ತಿದ್ದರು. ಈ ವಿಷಯವು ಪರಿಷ್ಕರಿಸಲ್ಪಡಲಿಲ್ಲ. ಬಹುಶಃ ಬ್ರಿಟಿಷ್ ಸಂಕಾರದವರು ೩೦೦ ಕ್ಕೆ ಕಡಮೆಯಿಲ್ಲದೆ ೪೫೦ ಕ್ಕೆ ಹೆಚ್ಚಿಲ್ಲದೆ ಕೇಂದ್ರ ಶಾಸನಸಭಾ ಸಂಖ್ಯೆಯನ್ನು ನಿರ್ಣಯಿಸಬಹುದು.

ಗವರ್ನರು ಜನರಲ್ಲಿಗೆ ಪ್ರತ್ಯೇಕಾಧಿಕಾರಗಳು.

ಕೆಲವು ವಿಷಯಗಳಲ್ಲಿ ಆಗುವ ವ್ಯಯವು ಪ್ರತ್ಯೇಕ ನಿಧಿಗಳ ಮೇಲೆ ಆಧಾರವಾಗಿರುವುದರಿಂದಲೂ, ಅಲ್ಪ ಸಂಖ್ಯಾಕ ಸಂಘಗಳಿಗೆ ಬೇಕಾದ ಸಂರಕ್ಷಣೆಗಳಿಗೂ ಈಗ ಇಂಡಿಯೂದ ಉದ್ಯೋಗದ ಮೇಲಿರುವ ಕೆಲವು ಶಾಖೆಗಳ ಉದ್ಯೋಗಸ್ಥರ ಹಕ್ಕುಗಳನ್ನು ಕಾಪಾಡುವುದಕ್ಕೂ ಇದುವರಿವಿಗೆ ಇಂಡಿಯೂದವರು ಅಂಗೀಕರಿಸಿದ್ದರು.

ಇದಕ್ಕೆ ಜರುಗಲು ಯಾರಿಗೂ ಒಬ್ಬರು ಅಧಿಕಾರಪೂರ್ಣವಕರಾಗಿರಬೇಕು. ನಾವು ನಮ್ಮ ಮಂತ್ರಿಗಳನ್ನು ನಂಬಬಹುದೇ ವಿನಾ ಇತರರಿಗೆ ಅಷ್ಟು ಧೈರ್ಯವಿಲ್ಲದಿರಬಹುದು.

ಈ ವಿಷಯದಲ್ಲಿ ಶಾಸನಸಭೆಗಳ ಅಧಿಕಾರಕ್ಕೆ ಪ್ರತ್ಯೇಕ ಅಧಿಕಾರಗಳದ್ವಾರಾಭಂಗವುಂಟಾಗಬಹುದೆಂದು ಕೆಲವರು ಭಯಪಡುತ್ತಿದ್ದರು.

ರಾಷ್ಟ್ರಗಳಲ್ಲೂ, ಸಂಸ್ಥಾನಗಳಲ್ಲೂ, ವಿಪರೀತ ಪರಿಸ್ಥಿತಿಗಳುಂಟಾದಾಗ ಅದನ್ನು ತಪಬಂದಿಗೆ ತರಲು ಗವರ್ನರು ಜನರಲ್ಲುಗಳಿಗೆ ಅಧಿಕಾರವಿರಬೇಕೆಂದು ಕೆಲವರು ಸೂಚಿಸಿದರು. ಆರ್ಡಿನೆನ್ಸು ಅಧಿಕಾರಿಗಳಿಗೇ ಕೆಲವರು ವಿಮುಖರಾಗಿದ್ದರು. ಇನ್ನು ಗವರ್ನರುಗಳಿಗೆ ಆ ಅಧಿಕಾರ ಕೊಡಲ್ಪಡುವುದಕ್ಕೆ ತೀವ್ರವಾದ ಆಕ್ಷೇಪಣೆಗಳನ್ನು ಮಾಡಿದರು.

ಸೈನಿಕ ಸಮಸ್ಯೆ—ಹೋರ್‌ರವರ ವಾಗ್ದಾನ.

ಸೈನಿಕ ವ್ಯವಸಾಯವನ್ನು ಇಂಡಿಯೂ ಮಂತ್ರಿವರ್ಗವು ಚರ್ಚಿಸಬೇಕೆಂದೂ ಹೇಳಿದರೆ ಸೈನಿಕ ಸೆಕ್ರೆಟರಿಯು ಗವರ್ನರ್ ಜೆನರಲ್ಲಿಗೆ ತನಗಿರುವ ಅಭಿಪ್ರಾಯ ಭೇದಗಳನ್ನು ಸೂಚಿಸಬೇಕೆಂದು ಬ್ರಿಟಿಷ್ ಇಂಡಿಯೂ ಪ್ರತಿನಿಧಿಗಳು ಚಕ್ರಗೋಷ್ಠಿಯಲ್ಲಿ ತಿಳಿಸಿದ್ದರು.

ಸೈನ್ಯದಲ್ಲಿ ಇಂಡಿಯೂದೇಶದವರನ್ನು ಸೇರಿಸುವಿಕೆ.

ಅವರು ಮಾಡಿದ ಎರಡನೆ ಸೂಚನೆಯೇನೆಂದರೆ ಇಂಡಿಯೂದೇಶದವರ ಸೈನ್ಯವನ್ನಾಗಿ ಮಾಡಬೇಕೆಂದರು. ಈಗ್ಗೆ ಮಟ್ಟಿಗೆ ಸೈನ್ಯವು ಪ್ರಭುತ್ವದವರ. ಅಧಿಕಾರದ ಕೈಕೆಳಗೆ ಪ್ರತ್ಯೇಕ ವಿಷಯವಾಗಿರಬೇಕೆಂಬುದನ್ನು ಅವರು ಒಪ್ಪಿಕೊಂಡರು.

ಇನ್ನು ಮೇಲೆ 'ಇಂಡಿಯೂದೇಶ ಸಂರಕ್ಷಕರ ಸಂಘ'ವೆಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟು ಸೈನ್ಯವನ್ನು ಭಾರತೀಯ ಯುವತರನ್ನಾಗಿ ಮಾಡುವ ವಿಷಯವನ್ನು ಈ ಸಂಸ್ಥೆಯು ಪರಿಶೀಲಿಸುತ್ತಿರಬೇಕೆಂದೂ ಭಾಧ್ಯತೆಯುಳ್ಳ ಮಂತ್ರಿಗಳು, ಅದಿಲ್ಲದ ಮಂತ್ರಿಗಳುಳ್ಳ ಸಂಯುಕ್ತ ಮಂತ್ರಿವರ್ಗವೇ ಬಡ್ಡಿಟ್ಟನ್ನು ಚರ್ಚಿಸಬೇಕೆಂದೂ ಭಾರತೀಯ ಪ್ರತಿನಿಧಿಗಳು ಸೂಚಿಸಿದ್ದರು.

ಮುಂತ್ಯ ಭಾರತೀಯ ಶಾಸನಸಭೆಯವರ ಅನುಮತಿಯಿಲ್ಲದೆ ನಮ್ಮ ಸೈನ್ಯವನ್ನು ವಿದೇಶಗಳಿಗೆ ಕಳುಹಿಸಬಾರದೆಂದೂ ಹಾಗೆ ಕಳುಹಿಸಿದಲ್ಲಿ ಬ್ರಿಟಿಷರೇ ಖರ್ಚುಗಳನ್ನು ವಹಿಸುವುದಾಗಿಯೂ ಇಂಡಿಯೂ ಮಂತ್ರಿಗಳು ಹೇಳಿದ್ದಾರೆ. ಆದರೆ ಅವರ ಆಕ್ಷೇಪಣೆಗೆ ಇದು ಸಮಾಧಾನವಲ್ಲ.

ಧನವಿಷಯಕ ಸಂರಕ್ಷಣೆಗಳು.

ರಿಜರ್ವ್ ನಿಧಿಯ ಸಂರಕ್ಷಣೆಗಾಗಿ ಇಂಡಿಯೂಮಂತ್ರಿಗೆ ಕೆಲವು ಅಧಿಕಾರಗಳು ಇರಬೇಕೆಂದು ಬ್ರಿಟಿಷ್ ಬ್ಯಾಂಕರುಗಳು ವಿಧಿಸಿದರು. ಇದರಲ್ಲಿ ಎಲ್ಲ ತೊಡಕುಗಳೂ ಸಮೂವೇಶದಲ್ಲಿ ತೀರ್ಮಾನವಾಗಲಿಲ್ಲ.

ಒಕ್ಕೂಟ ಪ್ರತಿನಿಧಿಗಳನ್ನು ಕಳುಹಿಸಿ.

ಚಕ್ರಗೋಷ್ಠಿಯ ಫಲಿತಾಂಶಗಳನ್ನು ಕುರಿತು ನಾವು ನಿರಾಶರಾಗಲಿಲ್ಲ ಅಂದುಕೊಂಡಷ್ಟು ಬಾಲಿಲ್ಲವೆನ್ನುವುದು ನಿಜ. ನಮ್ಮಲ್ಲಿ ಐಕಮತ್ಯವಿಲ್ಲದಿದ್ದ ಕಾರಣದಿಂದಲೇ ಬ್ರಿಟಿಷರ ಕೆಲಸವು ಸುಲಭವಾಯಿತು. ಸಮೂವೇಶ ಫಲಿತಾಂಶವನ್ನು ಅವರು ಜಾಗರೂಕತೆಯಿಂದ ಪರಿಶೀಲಿಸಬೇಕಲ್ಲದೆ, ಕೂಡಲೇ ತಳ್ಳಿ ಹಾಕಬಾರದು. ಅಖಿಲ ಇಂಡಿಯೂ ಸಮೂಹ್ಯ ನಿಶ್ಚಯ ವಿಷಯವಾಯಿತು. ಮತ್ತು ಕಾಲಸರಿಪಕ್ವದಲ್ಲಿ ಸಂಪೂರ್ಣತೆ ಹೊಂದಿದ ಸ್ವಪರಿಪಾಲನೆಗೆ ನ್ಯಾರಂಭವುಂಟಾಯಿತು. ಕೂಡತಿಗಳಿದ್ದಾಗ್ಯೂ ನೂತನ ರಾಜ್ಯಾಂಗದಲ್ಲಿ ಅವರು ಕೊಂಚ ಲಾಭವನ್ನಾದರೂ ಹೊಂದಬಹುದು. ಪತ್ರಿಕೆಗಳಲ್ಲಿ ಒರುವ ವಿಷಯಗಳ ಮೇಲೆಯೆ ತಾವು ಅಧಾರ ಪಡಬಾಂದು. ಇರುವ ಅವಕಾಶಗಳನ್ನು ಲಾಭಕಾರಿಯನ್ನಾಗುವ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು.

ಯೋಗ್ಯತೆಯೂ ಸಮರ್ಥತೆಯೂ, ವಿಶಾಲದೃಷ್ಟಿಯೂ ಉಳ್ಳ ಪ್ರತಿನಿಧಿಗಳನ್ನು ಶಾಸನಸಭೆಗಳಿಗೆ ಕಳುಹಿಸಬೇಕು.

ರಾಜ್ಯಾಂಗ ಯಂತ್ರಗಳು ಶಾಸನಗಳ ವೇಲೆಯೇ ಅಲ್ಲದೆ ಸಾಂಪ್ರದಾಯಗಳ ಮೇಲೂ ಅಭಿವೃದ್ಧಿ ಹೊಂದುವುದು. ಮುಖ್ಯಸ್ಥಾನಗಳಲ್ಲಿ ಸಮರ್ಥರೂ, ವಿಶ್ವಾಸನೀಯರೂ ನಿಯಮಿಸಲ್ಪಡಬೇಕು. ಆಗ ಸಂರಕ್ಷಣಾಧಿಕಾರಗಳು ದುರ್ವಿನಿಯೋಗವಾಗಲಾರದು. ಇಲ್ಲದಿದ್ದಲ್ಲಿ ಮಂತ್ರಿವರ್ಗಗಳ ತಂತ್ರಗಳಲ್ಲಿ ರಾಜಕೀಯ ವಿಷಯಗಳು ಸಿಕ್ಕಿ ಹೋಗುವುವು.

ಪ್ರ. ಮತ.

ಸರ್. ಪಿ. ಸಿ. ರಾಯ್‌ರವರ ಚರಿತ್ರೆ.

ಇವರು ಜನಿಸಿದುದು ಬಂಗಾಳದಲ್ಲಿ ಖುಲ್ನಾ ಜಿಲ್ಲೆಯ ಒಂದು ಹಳ್ಳಿಯಲ್ಲಿ ಇವರ ತಂದೆಯವರು ಜಮೀನ್ದಾರರು. ಆ ಹಳ್ಳಿಯಲ್ಲಿ ಇವರಿಗೆ ಒಳ್ಳೆ ಗೌರವವಿದ್ದಿತು. ಅಲ್ಲಿ ನಮ್ಮ ಈ ನಾಯಕನ ಚಿಕ್ಕ ವಯಸ್ಸಿನಲ್ಲಿಯೇ ಸಂಗಡಗಳನ್ನು ಸೇರಿಸಿ ಸರೋವರ ಕಾರದ ಕಾರ್ಯಗಳಿಗೆ ತಮ್ಮ ಸಹಾಯ ಹಸ್ತವನ್ನು ಬಹು ವರ್ಷಗಳಿಂದ ಚಾಚುತ್ತಿದ್ದರು. ಹಳ್ಳಿಯ ಸುಧಾರಣೆಯನ್ನು ಕೈಕೊಳ್ಳಬೇಕೆಂಬುವ ಲವಲವಿಕೆಯು ಇವರಿಗೆ ಚಿಕ್ಕಂದಿನಲ್ಲಿಯೇ ಇದ್ದಿತು. ತಮ್ಮ ನಾಡನ್ನು ಅಂದಿಗಿಂತ ಹೆಚ್ಚಿನ ಊರ್ಜಿತಾವಸ್ಥೆಗೆ ತರಬೇಕೆಂಬ ಇವರ ಚಿಕ್ಕಂದಿನ ಮನೋಗತವು ಇವರೊಡನೆ ಒಂದಾಗಿ ಬೆಳೆಯತೊಡಗಿತು. ಇವರು ಶಾಲೆಯಲ್ಲಿ ಓದುತ್ತಿರುವಾಗಲೇ ಕೇಶವಚಂದ್ರಸೇನರ ವರ್ಚಸ್ಸಿನ ಕಿರಣಗಳು ಒಂಗಾಳದ ಹಳ್ಳಿಗಳಲ್ಲಿಯೂ ನಾಟಿನ ಪ್ರದಾಯದ ಜಿಗಿದಾದ ಹಿಡಿತವು ಸಡಿಲಾಗುತ್ತ ನಡಿದಿತ್ತು. ಆದುದರಿಂದ ಇವರಿಗೆ ಪರದೇಶಕ್ಕೆ ಕಲಿಯುತ್ತೋಸುಗ ಪ್ರಯಾಣ ಬೆಳಸಲು ಕಷ್ಟ ಸಾಧ್ಯವಾಗಲಿಲ್ಲ. ಇವರ ಫಲಿತಾಂಶದ ವಿದ್ಯೆಗೆ ರಸಾಯನ ಶಾಸ್ತ್ರಕ್ಕಾಗಿ ಅಂದು ಹೆಸರುಗೊಂಡ ಎಡಿನ್ಬರ್ಗ್‌ವು ತಕ್ಕ ಕ್ಷೇತ್ರವಾಗಿತ್ತು. ಇಲ್ಲಿಯೆ ಅವರು ಓದಲಾರಂಭಿಸಿದರು. ಇವರ ಕೆಲ ಕಾಲದಲ್ಲಿಯೇ ಅಲ್ಲಿಯ ಪಿ. ಹೆಚ್. ಡಿ. ಡಿಗ್ರಿಯನ್ನು ಪಡಕೊಂಡು ಸರ್ಕಾರಿ ನೌಕರಿಯ ಎರೆಯನ್ನು ನುಂಗಲು ಉದ್ಯುಮಿಸಿದವರೆಲ್ಲ—ಅಲ್ಲಿ ಅವರು ಏಳು ವರ್ಷಗಳ ವರೆಗೆ ಇರುವೆಯಂತೆ ದುಡಿದು ರಸಾಯನ ಶಾಸ್ತ್ರದ ಅನುಭವವನ್ನು ಚೆನ್ನಾಗಿ ಪಡಕೊಂಡರು.

ಇಷ್ಟೊಂದು ಕಲಿತುಕೊಂಡು ಮನೆಗೆ ಬಂದಾಗ ಇವರ ಬಳಿಯಲ್ಲಿ ಬರೀ ಒಂಭೈ ರೂಪಾಯಿಗಳಿದ್ದವು. ಇವಿಷ್ಟನ್ನೇ ಭಂಡವಾಲವಾಗಿಟ್ಟುಕೊಂಡು ತಮ್ಮ ಮನೆಯಲ್ಲಿಯೇ ಔಷಧದ ಕಾರ್ಖಾನೆಯನ್ನು ಮೊದಲು ಮಾಡಿದರು. ಅದು ಸುಸ್ಥಿತಿಯ ರಸಾಯನ ಶಾಸ್ತ್ರಜ್ಞರೂ ಇವರೇ ಕೂಲಿಕಾರರೂ, ಮೇನೇಜರೂ ದಲಾಲರೂ, ಎಲ್ಲ ಇವರೊಬ್ಬರೇ ಆಗಿದ್ದರು. ಆದರೆ ಈಗ ಆ ಅವಸ್ಥೆಗೆ ೫೦ ಲಕ್ಷ ರೂಪಾಯಿ ಭಾಂಡವಾಲವಾಗಿದ್ದು ಅದರ ಇಮ್ಮಡಿಯಷ್ಟು ರಿಜರ್ವ್ ಫಂಡಿಗೆ ಸೇರಿಸಲ್ಪಟ್ಟಿರುವುದು. ಅವರು ಆ ಕಾರ್ಖಾನೆಯಲ್ಲಿ ಈಗ ಒಂದು ಭಾಗದಿಂದ ಇನ್ನೊಂದು ಭಾಗದ ವರೆಗೆ ೧೫೦ ಮೈಲಿಗೆ ವಿಸ್ತಾರವಾಗಿ ಬಾಡಿಯ ವೂರ್ಗವನ್ನು ಸ್ವಂತವಾಗಿ ಇಟ್ಟಿರುವಂತೆ. ಅದಲ್ಲದೆ ಅವರ ಮೇನೇಜರರಿಗೆ ಮಾಸಿಕ ವೇತನವು ಸುಮಾರು ೩೦೦೦ ರೂಪಾಯಿಗಳಿದ್ದು ಒಂದು ವರ್ಷದಲ್ಲಿ ಅವರಿಗೆ ೨ ಲಕ್ಷ ರೂ. ಕಮಿಶನ್ ದೊರತಿರುವದು. ಕೆಮಿಷ್ಟನಿಗೆ (ರಸಾಯನ ಶಾಸ್ತ್ರಜ್ಞನಿಗೆ)೧ ಲಕ್ಷ ರೂ. ಮಿಕ್ಕ ಪಾಲನ್ನು (Bouus) ಕೊಟ್ಟರಂತೆ. ಈ ಸಂಸ್ಥೆಯು ಬಂಗಾಲ ದೇಶಕ್ಕೆ ಮಾತ್ರವಲ್ಲ, ನಮ್ಮ ಇಡೀ ಹಿಂದೂಸ್ಥಾನಕ್ಕೆ ಭೂಷಣ ಪ್ರಾಯವಾಗಿದೆ. ಔಷಧಿಗಳಿಗಾಗಿ ಪರದೇಶಕ್ಕೆ ಹೋಗುತ್ತಿದ್ದ ಎಷ್ಟೋ ಕೋಟಿ ರೂಪಾಯಿಗಳನ್ನು ಇವರು ನಮ್ಮ ಇಡೀ ಜನತಾರಗದಲ್ಲಿಯೇ ಹಂಚಿಕೊಟ್ಟರೆಂಬದನ್ನು ವಿಚಾರಸ್ಮೃತಿ ದೇಶಕ್ಕೆ ಮಾಡಿದ ಸೇವೆಯ ಮಹತ್ವವು ಸ್ಪಷ್ಟವಾಗುವುದು

ಕಾಲ ಕಾಲಕ್ಕೆ ಜಲಪ್ರಳಯದ ತೊಂದರೆಗಳಿಗೆ ಎದುರಾಗುವ ಬಂಗಾಲಿಗಳ ಬಂಟರಿವರ. ಈ ವೃತ್ತಿಯಲ್ಲಿ ಅವರಿಗೆ ಎಷ್ಟು ಗೌರವವಿದೆಯೆಂಬದು ಅವರು ಬಳಲುತಿದ್ದ ಜನರಿಗಾಗಿ ಹಣವನ್ನು ಸಂಗ್ರಹಿಸಲು ಹೊಂಟಾಗ ವಿಶೇಷವೇ ಸಾರಿ ಕಂಡು ಒಂದಿರುವದು. ವರ್ಷವಾಡೀ ಯೂರೋಪಿಯನ್ ಮತ್ತು ಮುಸಲ್ಮಾನರು ಸಹ ಇವರ ಒಳಿಯಲ್ಲಿ ಸಾವಿರಾರು ರೂಪಾಯಿಗಳ ರಾಶಿಯನ್ನು ಚೆಲ್ಲಿ ತಮ್ಮ ಹೆಸರನ್ನೂ ಹೇಳದೆ ಹಣ ಕೊಟ್ಟದಕ್ಕಾಗಿ ರತೀತಿಗಳನ್ನೂ ಬೇಡದೆ ಸುಮ್ಮನೆ ಹೊರಟು ಹೋಗುವರಂತೆ. ಮಹಾ ಮುನಿಗಳು ಇವರನ್ನು ಒಮ್ಮೆ ಹಾಸ್ಯಕರವಾಗಿ 'ಜಲಪ್ರಳಯದ ಡಾಕ್ಟರ'ರೆಂದು ಸಂಭೋದಿಸಿದರು.

ಅವರು ಹೀರಳವಾಗಿ ದುಡಿಯುತ್ತಿದ್ದಾಗ ತಮ್ಮ ಸ್ವಂತ ಖರ್ಚಿಗೆ ಬರೀ ೪೭ ರೂಪಾಯಿಗಳನ್ನಿಟ್ಟುಕೊಂಡು ಮಿಕ್ಕುಳಿದ ಯಾವತ್ತೂ ಆದಾಯವನ್ನು ನಿರಾರು ಬಡ ವಿದ್ಯಾರ್ಥಿಗಳನ್ನು ವಾಲಿಸುವದರಲ್ಲಿ ವಿನಿಯೋಗಿಸುತ್ತಿದ್ದರು. ತಮ್ಮ ಸಾಬಂಧವು ಸಣ್ಣದೊಂದು ವೃತ್ತದಲ್ಲಿ ಮಾತ್ರ ತಿರುಗಬಹುದೆಂಬ ಭೀತಿಯಿಂದಲೋ ಏನೋ ಅವರು ಸದಾ ಬ್ರಹ್ಮಚಾರಿಗಳಾಯೇ ಇರುವರು. ಇವರಿಗೆ ಈಗ ೭೨ ವರ್ಷಗಳಾದವು. ೭೨ ವರ್ಷದ ಅನುಭವದೊಡನೆ ೨೭ ವರ್ಷದ ಚಟುವಟಿಕೆಯು ಇವರಲ್ಲಿ ಕಂಡು ಬರುತ್ತದೆ.

'ಕ. ಟಾ.'

ವಿಮರ್ಶೆ.

"ಫ್ರಾನ್ಸಿನ ಕ್ರಾಂತಿ' ಎಂಬ ಗ್ರಂಥವೊಂದು ನಮ್ಮ ಕೈ ಸೇರಿದೆ. "ತಾಯಿನಾಡು" ಪತ್ರಿಕೆಯ ಸಂಪಾದಕರಾದ ಶ್ರೀಯುತ ಪಿ. ಆರ್. ರಾಮಯ್ಯನವರು ಇದನ್ನು ರಚಿಸಿರುವರು. ಇವರು ವಾಚಕ ವರ್ಗಕ್ಕೆ ಅಪರಿಚಿತರೇನು ಅಲ್ಲ. ಇವರ ಸಾಹಿತ್ಯ ಸೇವೆಯು ಈ ಪುಸ್ತಕ ರಚನೆಯಿಂದ ಮತ್ತಷ್ಟು ಸ್ಮತ್ಯರ್ಹವಾಗಿದೆ. ಫ್ರಾನ್ಸಿನ ಕ್ರಾಂತಿಯು ಸರ್ವಸಾಧಾರಣವಾಗಿ ಚರಿತ್ರಾ ಪ್ರೇಮಿಗಳಲ್ಲಿ ನಾಣ್ಣುಡಿಯಾಗಿದೆ. ಇದನ್ನು ಶ್ರೀಯುತ ರಾಮಯ್ಯನವರು ಅವರ ಗ್ರಂಥದಲ್ಲಿ ಸವಿಸ್ತಾರವಾಗಿ ತಿಳಿಸಿ ವಾಚಕ ವೃಂದದ ಅಭಿಸಂತಸಿಗೆಗಳಿಗೆ ಪಾತ್ರರಾಗಿದ್ದಾರೆ. ಆಧುನಿಕ ದೇಶಸೇವಕರಿಗೂ ರಾಜಕೀಯ ಪಟುಗಳಿಗೂ, ಚಾಂತಃಭಿವೂನಿಗಳಿಗೂ ಇದು ಬಹಳ ಪ್ರಯೋಜನಕರವಾದ ಪುಸ್ತಕವೆಂದರೆ ಅತಿಶಯೋಕ್ತಿಯಾಗಲಾರದು.

ಇದನ್ನು ಸರ್ವರೂ ಓದಬೇಕೆಂಬುದೇ ನಮ್ಮ ಆಶೆ.

ಪುಸ್ತಕದ ಮುದ್ರಣವು ಮುದ್ದಾಗಿಯೇ ಇದೆ. ಕೇವಲ ಅನೋಘವಾದ ವಿಷಯಗಳನ್ನೊಳಗೊಂಡ ಈ ಗ್ರಂಥಕ್ಕೆ ಬೆಲೆ 1—0—0 ರೂಪಾಯಿ ಎಂದರೆ ಅದು ಹೆಚ್ಚಲ್ಲವೆಂಬುದೇ ನಮ್ಮ ಅಭಿಪ್ರಾಯ.

(ಸಂ. ಕೊ.)

The Popular Insurance Co., Ltd.

Head Office :—Mangalore, S. India.

The Pioneer Life Office of the West Coast

While having the most up–to–date features in modern life insurance such as easy revival facilities, non–forfeiture privileges, permanent dis–ability concession, Joint life assurance, female assurance and a very Popular RUPEE POLICY, the company has unrivalled scope for Economic Working.

Wanted an influential chief agent for Coorg on most remunerative terms.

For particulars apply to,

The Managing Director.

52–1

ಬೇಸಾಯ, ಪ್ರೌಢ ವಿದ್ಯಾಭ್ಯಾಸ ಮತ್ತು ನಿರುದ್ಯೋಗ.

(ಸರಸ್ವತಿಯವರಿಂದ.)

ಹಿಂದೂ ವಿಶ್ವವಿದ್ಯಾನಿಲಯಗಳು (Universities) ವರ್ಷಕ್ಕೆ ಸಾವಿರಾರು ಮಂದಿ ವಿದ್ಯಾರ್ಥಿಗಳಿಗೆ ಡಿಗ್ರಿಗಳನ್ನು ಕೊಟ್ಟು, ಹೊಂಕ್ಕಟ್ಟುತ್ತದಲ್ಲದೆ ಸ್ವತಂತ್ರ ಜೀವನಕ್ಕೆ ಬೇಕಾಗುವ ರೀತಿಗಳನ್ನು ಮೂತ್ರ ಕಲಿಸಲಾರವು. ಈ ರೀತಿ ತೇರ್ಗಡೆ ಹೊಂದುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಯಾವುದಾದರೊಂದು ತಾತ್ಕಾಲಿಕ ಉದ್ಯೋಗವನ್ನು ಹಿಡಿದು ತನ್ನ ವಿದ್ಯಾಭ್ಯಾಸವನ್ನು ಮುಂತ್ತು ಮುಂದುವರಿಸಬೇಕೆಂಬ ಆಸೆ. ಅದಕ್ಕೆ ಸಾಧ್ಯವಿಲ್ಲದವರು ತಮ್ಮ ಅದೃಷ್ಟವನ್ನು ಹಿಯ್ಯಾಳಿಸಿಕೊಳ್ಳುತ್ತ ಏನಾದರೊಂದು ನೌಕರಿಯು ದೊರಕಿದರೆ ಸಾಕೆಂದು ಊರಿಲ್ಲಾ ಹುಡುಕುವವರನ್ನು ಕಂಡು ಕಂಡು ಕಣ್ಣುಗಳು ಸೋತಿರುವುವು. ಕಿಂಕರತ್ವವನ್ನು ಎಷ್ಟರ ಮಟ್ಟಿಗೆ ನಮ್ಮ ರಕ್ತದಲ್ಲಿ ತುಂಬಿಸಲು ಶತಶತ್ಯವಾಗಿವೆ ನಮ್ಮಿ 'ಯೂನಿವರ್ಸಿಟಿ'ಗಳೆಂಬುದನ್ನು ತಿಳಿದೂ ತಿಳಿದೂ ಪತಂಗದ ಹುಳುಗಳು ಬೆಂಕಿಯ ಜ್ವಾಲೆಗಳಿಗೇ ಬೀಳುವಂತಾಗಿದೆ ನಮ್ಮ ಸಹೋದರರ ಸಾಡು.

ಹಿಂದೂಸ್ಥಾನದ ಬೆನ್ನೆಲುಬೇ ವ್ಯವಸಾಯ ವ್ಯವಸಾಯವನ್ನು ಸುಶಿಕ್ಷಿತ ರೀತಿಯಿಂದ ಮಾಡಲು ತೋರಿಸುವ ಔದಾಸೀನ್ಯವೇ ನಮ್ಮ ದೇಶದ ಬಡತನಕ್ಕೆ ಮೂಲ ಕಾರಣ.

ಕಾಲೇಜನ್ನು ಪ್ರವೇಶಿಸುವದೇ ಯಾವುದೋ ಒಂದು ದೊಡ್ಡ ಹುದ್ದೆಯು ತಾನು ಡಿಗ್ರಿಯನ್ನು ಪಡೆದು ಕಾಲೇಜಿನಿಂದ ಹೊರಬೀಳುವುದನ್ನೇ ಕಾಯುತ್ತಿರುವುದೆಂಬ ಭ್ರಮೆಯಿಂದ; ವಿದ್ಯಾರ್ಜನೆಯ ಭ್ರಮೆಯಿಂದಲ್ಲ. ಲೋಕಾನುಭವವು ಬಂದೊಡನೆಯೇ ವಿದ್ಯಾರ್ಥಿಯು ಪಶ್ಚಾತ್ತಾಪಕ್ಕೊಳಗಾಗುವನು. ತನ್ನ ದೊಡ್ಡ ದೊಡ್ಡ ಡಿಗ್ರಿಗಳೆಲ್ಲವೂ ವ್ಯರ್ಥವೆಂದು ಆಗ ತಾನೇ ಅವನಿಗೆ ಗೊತ್ತಾಗುವುದು. ತಾನಿಟ್ಟುಕೊಂಡಿದ್ದ ದೊಡ್ಡ ಆಶೆಯೆಲ್ಲಾ ನಿರಾಶೆಯೂದೊಡನೆ ಎದೆಗುಂದಿ ಎಷ್ಟೇ ಕಡಿಮೆ ದರ್ಜೆಯ ಹುದ್ದೆಯಾದರೂ ಸರಿಯೇ ಜೀವನವು ನಡೆದರೆ ಸಾಕೆಂದು ಸಿಕ್ಕಿದ್ದೊಂದು ನೌಕರಿಯನ್ನು ಒಪ್ಪಿಕೊಳ್ಳುವನು. ತನ್ನ ಮನೆಯಲ್ಲೇ ದುಡಿಯಲು ಏನೂ ಸ್ಥಳವಿಲ್ಲದವನಿಗಾದರೂ ನೌಕರಿಗೆ ಹೋಗದೆ ನಿರ್ವಾಹವಿಲ್ಲವೆಂದಲೂ ಒಪ್ಪಿಕೊ[illegible] ಭೂಮಿ ಇರುವವರೂ ಸಹಾ ಸ್ವಂತ ಭೂಮಿಗಳನ್ನೆಲ್ಲಾ ಗೇಣಿಗೆ ಕೊಟ್ಟು ಅಥವಾ ಹಾಳು ಬಿಟ್ಟೋ ಪಟ್ಟಣಗಳನ್ನು ಸೇರಿ ಕೆಲಸವನ್ನು ಹುಡುಕಿಕೊಂಡು, ಅದೂ ಸಿಕ್ಕದೆ ತ್ರಿಶಂಕು ಸ್ವರ್ಗವನ್ನನುಸರಿಸಬೇಕೇ? ಅವನು ಕಲಿತುದಂ ಫಲತಾಂತವೇ ಇದಾದರೆ ಕಲಿತುದು ವಿದ್ಯೆಯೆನಿಸಿಕೊಳ್ಳುವುದೇ? ಸ್ವತಂತ್ರ ಜೀವನ ಮಾಡುವ ಒಕ್ಕಲಿಗನು ಎಷ್ಟೊ ಲೋಕಾನುಭವಸ್ಥನಾಗಿದ್ದರೂ ಸಹ ವ್ಯರ್ಥವಾಗಿ ಅವನು ಅವಿದ್ಯಾವಂತನಾಗುವನಲ್ಲವೇ ವಿದ್ಯಾವಂತನೆನಿಸಿಕೊಂಡವನ ದೃಷ್ಟಿಯಿಂದ? ಇಂಥ ಅಜ್ಞಾನಮೂರ್ತಿಯೂಡ ಒಕ್ಕಲಿಗನಿಗೆ ಮೂತ್ರ ಅನಿವಾರ್ಯವಾದ ಜೀವನೋಪಾಯವೇ ಹಳ್ಳಿಯಲ್ಲಿ ದುಡಿಯುವ ಕೆಲಸವೆಂದು ತಪ್ಪು ತಿಳಿದುಕೊಂಡುದರಿಂದಲ್ಲವೇ ನಮ್ಮ ಶಿಕ್ಷಿತರೆಂದೆನಿಸಿಕೊಂಡ ಸಹೋದರರನೇಕರು ಕೆಲಸವಿಲ್ಲದೆ ಒದ್ದಾಡುತ್ತಿರುವುದು. ? ಎಂದು ನಮ್ಮನ್ನಾವರಿಸಿರುವ ಈ ಮೂಢಭಾವನೆಯು ಪೂರ್ಣವಾಗುವುದೋ ಆಗಲೇ ನಮ್ಮ ಭ್ರಾಂತ ಭೂಮಿಗೆ ಪುನರ್ಜನ್ಮವಾಗುವದು.

ಹಿಂದೂಸ್ಥಾನದ ಬೇಸಾಯಕ್ರಮವು ಬಹಳ ಹೀನಸ್ಥಿತಿಯಲ್ಲಿರುವುದು ಸಮಸ್ತರಿಗೂ ಗೊತ್ತಿರುವ ಸಂಗತಿಯಾಗಿದೆ. ದೇಶದ ಬಡತನಕ್ಕೆ ಭೂಮಿಯುಸಾರಂಹಿತವಾಗಿರುವುದು ಮೂತ್ರ ಕಾರಣವಲ್ಲ. ಒಕ್ಕಲಿಗನ (farmers) ಅಶಿಕ್ಷಿತತನವೇ ಇದಕ್ಕೆ ಕಾರಣವೆನ್ನಬೇಕು. ಕಾಲಗತಿಯು ಬದಲಾಗುತ್ತಿರುವಂತೆಯೇ ವ್ಯವಸಾಯ ಕ್ರಮವನ್ನೂ ಅದಕ್ಕನುಸಾರವಾಗಿ ಬದಲಾಯಿಸಿಕೊಂಡು ಬರಬೇಕು. ಆ ಕಾಲಕ್ಕನುಸಾರವಾಗಿ ನಡೆದುಕೊಂಡುದರಿಂದಲ್ಲವೇ ನಮ್ಮ ಪೂರ್ವಿಕರು ಐಶ್ವರ್ಯವಂತರಾಗಿಯೂ ದೃಢಕಾಯರಾಗಿಯೂ ಬದುಕಿ "ಹಿಂದೂ ಸ್ಥಾನವೇ ಲೋಕದಲ್ಲೆಲ್ಲಾ ಐಶ್ವರ್ಯ ಮತ್ತು ನಾಗರಿಕತೆಯಿಂದ ತುಂಬಿದ ದೇಶ—ಬಹಳ ಫಲವತ್ತಾದ ದೇಶ ಒಕ್ಕಲಿಗರ ಕನರೂರು" ಎಂದು ಹೊಗಳಿಸಿಕೊಂಡುದು?

ವ್ಯವಸಾಯಕ್ಕೆ ಭೂಮಿಯಿಲ್ಲದೆ ಕಷ್ಟಪಡುವವರ ಸಾಡಂತಿರಲಿ. ತನ್ನ ಮಗನು 'ಡಿಸ್ಟ್ರಿಕ್ಟ್ ಜಡ್ಜ್' ಕೆಲಸಕ್ಕೆ ಬಂದಾನೆಂಬ ಆಸೆಯಿಂದ ತನ್ನಲ್ಲಿದ್ದ ಆಸ್ತಿಯನ್ನೂ ಮಾರಿ ಪೌಢ ವಿದ್ಯಾಭ್ಯಾಸವನ್ನು ಮಾಡಿಸಿದ ತಂದೆಯರೆಷ್ಟೋ ಮಂದಿ ಇರುವರು. ಅವರಾಸೆಯು ನೆರವೇರಿದರೆ ಎಲ್ಲವೂ ಸರಿಹೋಯಿತು. ಆದರೆ ಹಾಗೆ ಕೃತಕೃತ್ಯರಾದವರಾದರೂ ಎಷ್ಟು ಜನರಿರುವರು? ಆಸ್ತಿ ಮಾರಿದ್ದೂ ಆಯಿತು. ಮಗನು 'ಡಿಗ್ರಿ ಪಡೆದದ್ದೂ ಆಯಿತು. ಕೈಗೆ ಬಂದ ತುತ್ತು ಬಾಯಿಗಿಲ್ಲವೆಂಬಂತೆ ಕಾಲನಿಗೇನಾದರೂ 'ಡಿಗ್ರಿ' ದಾರನು ಆಹುತಿಯಾಗಿಬಿಟ್ಟರೆ ಆ ಸಂಸಾರದಲ್ಲಿ ಉಳಿದವರ ಸಾಡೇನು? ಹೀಗಾದುದು ಕಲ್ಪನೆಯಲ್ಲ ಅಥವಾ ವಿಪರೀತಾಲಂಕಾರವೂ ಅಲ್ಲ. ನಾನೇ ನೋಡಿದ ದೃಶ್ಯ.

ಈಗಿನ ಶಿಕ್ಷಿತ ತರುಣರಲ್ಲನೇಕರು ತಮ್ಮ ವಿದ್ಯಾಭ್ಯಾಸವು ಮುಗಿದ ಮೇಲೆ ಪರಸೇವೆ ಮಾಡಬೇಕೆಂಬ ಆಲೋಚನೆಗೇ ತಿಲಾಂಜಲಿಯನ್ನಿತ್ತು, ತಾನು ಹುಟ್ಟಿದ ಹಳ್ಳಿಯಲ್ಲಿಯೇ ಬೇಸಾಯಗಾರನಾಗಿ ಸ್ವತಂತ್ರಿಯೂಗಿ ಜೀವಿಸಬಹುದು. ಮತ್ತು ತನ್ನ ಸುತ್ತ ಮುತ್ತಲಿನ ಅಶಿಕ್ಷಿತ ಒಕ್ಕಲಿಗರನ್ನೂ (farmers) ತನ್ನ ಶಿಕ್ಷಣದಿಂದ ತರಬೇತು ಮಾಡಬಹುದು. ನವೀನ ರೀತಿಯಿಂದ ತನ್ನ ಹೊಲದಲ್ಲಿ ಕೆಲಸಮಾಡಿ ಹೆಚ್ಚು ಬೆಳೆಯನ್ನು ಬೆಳೆದು ಅವಿದ್ಯಾವಂತರಾದ ನೆರೆಕರೆಯವರೆಲ್ಲರೂ ತನ್ನ ಮೇಲ್ಪಂಕ್ತಿಯನ್ನನುಸರಿಸಿ ಅವರೂ ಉತ್ತಮ ಸ್ಥಿತಿಗೆ ಬರುವಂತೆ ಶಿಕ್ಷಿಸಬಹುದು. ಹಳೆಯ ಕ್ರಮದಲ್ಲಿಯೇ ವ್ಯವಸಾಯ ಮಾಡಿಕೊಂಡಿರುವ ಸ್ವಲ್ಪ ಭೂಮಿ ಇರುವ ಬಡ ರೈತರನೇಕರಿರುವರು. ದಿನಕ್ಕೆ ಕೆಲವು ಆಣೆಗಳಿಗಿಂತ ಹೆಚ್ಚು ಉತ್ಪತ್ತಿಯಿಲ್ಲದ ಅವರು ತಮ್ಮ ತಮ್ಮ ಜೀವನವನ್ನು ಹೇಗೆ ನಡೆಸಿಕೊಂಡು ಹೋದಾರು? ಸಂಸಾರವಂದಿಗರಾದಂತೂ ಅವರ ಪಾಡು ಇನ್ನಷ್ಟು ಕಷ್ಟ. ಸುಧಾರಿಸಿದ ಕ್ರಮಗಳಿಂದ ಉತ್ಪತ್ತಿಯನ್ನು ಇಮ್ಮಡಿ ಮಾಡುವ ಸಲಹೆಗಳನ್ನು ಅವರಿಗೆ ಬೋಧಿಸಿ, ತನ್ನ ಭೂಮಿಯಲ್ಲೂ ಮಾಡಿ ತೋರಿಸಿಕೊಟ್ಟರೆ ಅನುಕೂಲವಿರುವ ವಿದ್ಯಾವಂತರೆಲ್ಲರೂ ಬಡ ರೈತರೆಲ್ಲರಿಗೂ ಎಷ್ಟು ದೊಡ್ಡ ಉಪಕಾರವನ್ನು ಮಾಡಿದಂತಾಗುವುದು? ಅಪಾರವಾದ ಉತ್ತಮ ಸ್ಥಿತಿಗೆ ತಂದ ಕೀರ್ತಿಯೂ ಇವರಿಗೆ ಲಭಿಸುವುದು. ಆಗಲೀಗ ಇವರು ಕಲಿತ ವಿದ್ಯೆಯು ನಿಜವಾದ ವಿದ್ಯೆಯೆಂದೆನಿಸಿಕೊಳ್ಳುವುದು. ದೇಶಸೇವೆಯನ್ನೂ ಯಥಾಶಕ್ತಿ ಮಾಡಿದಂತಾಗುವುದು.

ವಿದ್ಯಾಭ್ಯಾಸದ ನಂತರ ನಮ್ಮ ದೇಶದ ಯುವಕರು ದೇಶಸೇವೆಗಾಗಿ ಮಾಡಬೇಕಾದ ಕಾರ್ಯಗಳನೇಕವಿದ್ದರೂ, ಇದು ವ್ಯವಸಾಯಕ್ಕೆ ಸಂಬಂಧಪಟ್ಟ ಲೇಖನವಾದ್ದರಿಂದ ಕೊನೆಗೆ ಕಿಂಚಿತ್ತು ಮೂತ್ರ ಹೇಳಿ ಮುಗಿಸಿಬಿಡುವೆನು. ಹಿಂದೂಸ್ಥಾನದಲ್ಲಿ ಅದಂಲ್ಲೂ ಕೊಡಗಿನಲ್ಲಿ ರೈತಾವಳಿಯ ಸಂಧಾರಣೆಯೂ ಏತಕೆಂದರೆ ನೀರುದ್ಯೋಗವೆಂಬ ಮಾರಿಯು ನಮ್ಮೂರಿನಿಂದ ತೊಲಗಲೇಬೇಕು. ಈಗಿರುವ ದಾರಿದ್ರ್ಯವೂ ಇಂಗಲೇಬೇಕು.

ಅಬಾಲವೃದ್ಧರಾದ ಪ್ರತಿಯೊಬ್ಬನೂ ಪ್ರತಿಯೊಬ್ಬಳೂ ದೇಶಸೇವೆಗಾಗಿ ರಕ್ತವನ್ನು ಬಸಿಯುವು ಕಾಲವೊದಗಿದ ಈಗ ನಮ್ಮ ದೇಶದಲ್ಲಿ ಈ ಸಮಯವನ್ನು ಕಳೆದುಕೊಳ್ಳದೆ, ದೇಶಸೇವೆಯ ದೃಷ್ಟಿಯಿಂದಲೂ ನಿನ್ನ ಪ್ರಯೋಜನ ದೃಷ್ಟಿಯಿಂದಲೂ ವ್ಯವಸಾಯದ ಅಭಿವೃದ್ಧಿಗೋಸ್ಕರ ನಿನ್ನ ಶಕ್ತಿ ಯೊರಿ ಕೆಲಸಮಾಡುವಂತೆ ಈ ದಿನವೇ ಬದ್ಧಕಂಕಣರಾಗಿರಿ ಇಷ್ಟೇ ನನ್ನ ಪ್ರಾರ್ಥನೆ.

ಸೆಂಟ್ರಲ್ ಬ್ಯಾಂಕು ವಿೂಟಿಂಗು:

ಈ ಬ್ಯಾಂಕಿನ ಡೈರೆಕ್ಟರುಗಳ ವಿೂಟಿಂಗು ತಾ. 28-1-1933 ರಲ್ಲು ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. 1. ರಾವ್‌ಬಹದ್ದೂರ್ ಪಿ ದೇವೈಯ್ಯನವರು (ಪ್ರೆಸಿಡೆಂಟರು) 2. ಮೆ. ಗಳಾದ, ಪ್ಲೀ ಶಂಭೇರ ದೇವೈಯ್ಯನವರು, 3. ಯಸ್. ಬಸಪ್ಪನವರು, 4 ಎಂ ಡಗಣಪತ್ಯಯವರು, ಯೆರ್. ಯಲ್. ಸಿ. 5. ಪುತ್ತಮನೆ ಮುದ್ದವೈಯ್ಯನವರು, 6. ಪುಚ್ಚಿಮಾಡ ಮಾದೈಯ್ಯನವರು, ೪. ಉದಿಯಂಡ ಮಾಚೈಯ್ಯನವರು 8. ಕೋಡಿರ ತಮ್ಮೈಯ್ಯನವರು ಮತ್ತು 9. ಮನೆಯಪಂಡ ಯಂ. ಬೆಳ್ಯಪ್ಪನವರು (ಗೌರವ ಕಾರ್ಯದರ್ಶಿ ಮತ್ತು ಗೌರವ ಟ್ರೆಜರರ್) ಕೋ-ಆಪರೇಟಿವ್ ಸೊಸೈಟಿಗಳ ರಿಜಸ್ಟ್ರಾರರೂ ಸಹ ಹಾಜರಿದ್ದರು.

ಈ ಕೆಳಗಿನ ಡೈರೆಕ್ಟರುಗಳು ಗೈರಾಜರು ಆಗಿದ್ದರು. ಮೆ. ಗಳಾದ ಕೆ. ಎನ್. ಸಂಬ್ಯಾಯರು, 2. ಅಪ್ಪಾರಂಡ ಚಂಗಪ್ಪನವರು, ಯಂ. ಯಲ್. ಸಿ. 3. ಪಾಡಂಡ ಚಂಗಪ್ಪನವರು, ಯಂ. ಯಲ್. ಸಿ. 4 ನಡಿಕೇರಿಯಂಡ ಸೋಮೈಯ್ಯನವರು ಯಂ. ಯಲ್. ಸಿ. 5, ಎಸ್. ಎನ್. ರಾಮುಸೆಟ್ಟು ಮತ್ತು 6. ಕೋಟೆರ ಪಿ. ಚಿಣ್ಣಪ್ಪನವರು.

I. ಕಳೆದ ವಿೂಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಅಮ್ಮತ್ತಿ ಟೌವುನ್ ಸೊಸೈಟಿಯು ಸಾಲದ ಅರ್ಜಿ ಓದಲಾಯಿತು.

ಈ ಅರ್ಜಿಯನ್ನು ರಿಜಸ್ಟ್ರಾರವರ ರಿವೂರ್ಕ್‌ಗಳಿಗೆ ಕಳುಹಿಸಬೇಕೆಂತ ತೀರ್ಮಾನವಾಯಿತು.

3. ಕಿಗ್ಗಟ್ಟುನಾಡು ಕ್ರಾಫ್, ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಯ ಸಾಲದ ಅರ್ಜಿ ಓದಲಾಯಿತು.

ಸದರಿ ಸೊಸೈಟಿಯಿಂದ ಬ್ಯಾಂಕಿಗೆ ಬರಬೇಕಾದ ವಾಯಿದೆ ಯೊರಿಂದ ಸಾಲ ಪಾವತಿ ಮಾಡಿದ ಪಕ್ಷ 5000 ರೂಪಾಯಿ ತಾ. 31—10—33 ಮತ್ತು 30—11—33 ರಲ್ಲಿ 1500 ರೂಪಾಯಿಯೂ ಮತ್ತು 31—12—33 ರಲ್ಲಿ 2000 ರೂಪಾಯಿಯೂ ಪಾವತಿ ಮಾಡುವಂತೆ ಮಂಜೂರ್ಮಾಡಲಾಯಿತು.

4. ತಾರೀಕು 16—1—33 ರ ಡೈರೆಕ್ಟರುಗಳ ವಿೂಟಿಂಗಿನಲ್ಲಿ ತೀರ್ಮಾನವಾದ ಮೇರೆ ಸಬ್ ಕಮಿಟಿಯವರು ತಾ. 22—1—33 ರಲ್ಲು ಬ್ಯಾಂಕಿನ ಸಂಘಗಳ ಮೇಲ್ವಿಚಾರಣೆ ಮತ್ತು ದ್ರವ್ಯಸಹಾಯ ಮಾಡುವ ಕೆಲಸಗಳನ್ನು ಒಂದಾಗಿ ಸೇರಿಸುವ ಉದ್ದೇಶ ತಯಾರ್ಮಾಡಿದ ಕರಡು ಬೈಲಾವನ್ನು ಓದಲಾಗಿ ಒಪ್ಪಲಾಯಿತು.

5. ಚೇಂದಂಡ ಕುಟುಂಬದ, ಸೊಸೈಟಿ ಚೆಂಬಾಂಡ ಕುಟುಂಬದ ಸೊಸೈಟಿ, ಹಾಲುಗುಂದ ಸೊಸೈಟಿ, ಬಿಳುಗುಂದ ಸೊಸೈಟಿ ಮತ್ತು ಕಿತ್ತೂರು ಸೊಸೈಟಿ, ಈ 5 ಸೊಸೈಟಿಗಳು ಬ್ಯಾಂಕಿಗೆ ಪಾವತಿ ಮಾಡಲು ಮುಂದೆ ಬರುವ ಮಾರ್ಚಿ ತಿಂಗಳ ವರೆಗೆ ವಾಯಿದೆ ಕೊಡಬೇಕಾಗಿ ಬರಕೊಂಡ ಅರ್ಜಿಗಳನ್ನು ಓದಲಾಯಿತು.

ಮೇಲ್ಕಂಡ ಅರ್ಜಿಗಳ ಮೇರೆ ವಾಯಿದೆ ಕೊಡಲು ಆಗುವುದಿಲ್ಲವಾಗಿಯೂ, ಒಡನೆ ವಾಯಿದೆ ಯೊರಿದ ಸಾಲಗಳನ್ನು ಬ್ಯಾಂಕಿಗೆ ಪಾವತಿ ಮಾಡಬೇಕಾಗಿಯೂ ತೀರ್ಮಾನವಾಯಿತು.

ಮಡಿಕೇರಿ, ಪಿ. ದೇವೈಯ್ಯ,

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ ಮುನ್ಸಿಪಾಲಿಟಿ ಮೆಂಬರುಗಳ ಚುನಾವಣೆಯು ಈ ತಾ. 7ನೇ ಮಂಗಳವಾರ ನಡೆಯುವುದು.

ಮಡಿಕೇರಿಯಲ್ಲಿ ಈ ವಾರ ಕಾಫಿ ಖಂಡಿಗೆ ರೂ. 220 ರಿಂದ 225ರ ವರೆಗೆ ಇದೆಯೂಗಿ ತಿಳಿದು ಬರುತ್ತದೆ.

ಕಳೆದ ತಾ. 30ನಲ್ಲು ಮಡಿಕೇರಿ ನಾಡು ಹೆಬ್ಬಟ್ಟಗೇರಿಯಲ್ಲಿ ರಾಮು ಎಂಬ ಒಬ್ಬ ಬಿಲ್ಲವನು ಬೈನೆ ಮರದಿಂದ ಆಕಸ್ಮಾತ್ತಾಗಿ ಬಿದ್ದು ಮೃತಪಟ್ಟಿರುವನು.

ಕ್ರಿಕೆಟ್ ಆಟದ ಫೀಲ್ಡಿಂಗಿನಲ್ಲಿ ಚತುರನೆಂದು ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ಮೆ ಮಂಡೇಪಂಡ ಉತ್ತಪ್ಪನವರಿಗೆ ಒಂದು ಭೃಂಗಾರದ ಪದಕವು ಇನಾಮಾಗಿ ದೊರಕಿದೆ.

ಹತ್ತನೇ ಮೈಲು ಸಿ. ಯಸ್. ಶಾಲೆಯ ತೃತೀಯ ವಾರ್ಷಿಕೋತ್ಸವವು ಮೇ. ಪಿ ಬಿ. ಮೇದಪ್ಪ ಬಿ. ಎ. ಬಿ. ಎಲ್. ನವರ ಅಧ್ಯಕ್ಷತೆಯಲ್ಲು ಈ ತಾ. 5ನೇ ಆದಿತ್ಯವಾರ ಜರಗುವುದು.

ಸೋಮವಾರಪೇಟೆಯಲ್ಲಿ ಪ್ಲೇಗು ಪ್ರಬಲವಾಗಿತ್ತ ಬರುತ್ತಿದೆಯೆಂದೂ, ಇದರಿಂದ ಕೆಲವು ಮರಣಗಳೂ ಸಂಭವಿಸಿದೆಯೆಂದೂ, ತೊರೆನೂರು ಗ್ರಾಮದಲ್ಲೂ ಸಹ ಪ್ಲೇಗು ತಲೆದೋರಿದೆಯೆಂದೂ ವರ್ತಮಾನ.

ಕಳೆದ ವಾರ ವೀರಾಜಪೇಟೆಯ ಮುನ್ಸಿಪಲ್ ಆಫೀಸನ್ನು ತೆರೆಯುವ ಸಮಾರಂಭದಲ್ಲಿ ನೆಲ ಗುಂಡು ಹಾರಿಸುವಾಗ ಅಕಸ್ಮಾತ್ತಾಗಿ ಒಬ್ಬನ ಕೈಗೆ ತಗಲಿ ಅಂಗೈ ನಜ್ಜುಗುಜ್ಜಾಗಿ ಆಸ್ಪತ್ರೆಗೆ ತಕ್ಷಣವೇ ಒಯ್ಯಲ್ಪಟ್ಟನು.

ಕಳೆದ ತಾ. 31ರ ರಾತ್ರಿ ಹೊಸೂರು ಗ್ರಾಮದ ಮೆ ಪಂದ್ಯಂಡ ಬೆಳ್ಯಪ್ಪ ಮತ್ತು ಚಂಗಪ್ಪನವರ ಸುಮಾರು 300 ಭಟ್ಟಿ ಭೂಮಿಯ ಮೆದೆಯು ಪೂರ್ತಿ ಬೆಂದು ಹೋಗಿ ಸಾಧಾರಣ 12 ಗಾಡಿ ಭತ್ತ ನಷ್ಟವಾಗಿದೆಯೆಂದು ವರ್ತಮಾನ.

ಕಳೆದ ತಾ. 23ರಲ್ಲು ಕುರ್ಚಿ ಗ್ರಾಮದ ಅಜ್ಜನೂಡ ಶ್ರೀಮತಿ ಗಣಪತಿ ಸೀತವ್ವನವರ ಸುಮಾರು 250 ಭಟ್ಟಿ ಭೂಮಿಯ ಮೆದೆಯು ಮಧ್ಯಾಹ್ನ 12 ಗಂಟೆಗೆ ಹ್ಯಾಗೋ ಬೆಂಕಿ ಬಿದ್ದು ಪೂರಾ ಸುಟ್ಟು ಹೋಗಿ ಸುಮಾರು 10 ಗಾಡಿ ಭತ್ತ ನಷ್ಟವಾಗಿದೆಯೆಂದು ತಿಳಿಯುತ್ತೇವೆ.

ಮೈಸೂರು ಗವರ್ನ್‌ಮೆಂಟ್ಸ್ ಕಾಲೇಜಿನಲ್ಲಿ ಜರಸಿದ ಬಿ. ಎ ಪರೀಕ್ಷೆಯಲ್ಲಿ ಕಾರ್ಟ್ ಜೋರ್ಡ್, ಎಕನಾಮಿಟ್ಸ್, ಟೈಪ್ ರೈಟಿಂಗ್, ಬ್ಯಾಂಕಿಂಗ್ ಮತ್ತು ಶಾಎಂಡ್ ಪ್ರ್ಯಾಕ್ಟಿಸ್ ಆಫ್ ಕಾಮರ್ಸಿನಲ್ಲಿ ಮೆ. ಕೋಡಿರ ಯಂ. ಕಾರ್ಯಪ್ಪನವರು ಎಂಡನೇ ತರಗತಿಯಲ್ಲಿ ತೇರ್ಗಡೆಯಾಗಿರುತ್ತಾರೆಂದು ತಿಳಿದು ಸಂತೋಷಪಡುತ್ತೇವೆ.

ಇಂಡಿಯಾ ಸರ್ಕಾರದವರು ರಾಜಕೀಯ ಕೈದಿಗಳ ವಿಷಯ ಹೊರಡಿಸಿದ ಪತ್ರದಲ್ಲಿ ಕೊಡಗಿನಿಂದ ಹೋದ ಹಾಲಿ ಜೈಲಿನಲ್ಲಿ ಇರುವ ರಾಜಕೀಯ ಕೈದಿಗಳು ಪೂರಾ ಹಿಂದೂಗಳೆಂದೂ ಅವರು ಜೀವನೋಪಾಯದ ದಾರಿ ಇಲ್ಲವರಾಗಿದ್ದಾರೆಂದೂ ತಿಳಿಸಿದ್ದಾರೆ. ಕಳೆದ ವಾರ ಮಡಿಕೇರಿಯಲ್ಲಿ ಹರಿಜನರ ಖೈದಾಗುವ ಮುಂಚೆ ಪ್ರಕಟಿಸಿದ ಪತ್ರವಾಗಿದೆ.

'ಕೊಡವಂಡ ಕಾರ್ಯಪ್ಪ' ವೆಸ್ಟೋರಿಯಲ್ ಹಾಕಿ ಟೂರ್ನಮೆಂಟಿನ ಫೈನಲ್ ಆಟವು ಸ್ಕೂಲಿನ 'ಎ' ಟೀಮಿನವರಿಗೂ ಮತ್ತು ಟೀಚರ್ಸ್ ಟೀಮಿನವರಿಗೂ ತಾ. 30—1—33ರಲ್ಲು ನಡೆದು, ಸ್ಕೂಲು ಟೀಮಿನವರು ಗೆದ್ದರು. ಗೆದ್ದವರಿಗೆ ಅದೇ ದಿನ ಸಾಯಂಕಾಲ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾದ ಮೆ. ಪಾಂಡಂಡ ಚಂಗಪ್ಪನವರು ಬಟ್ಟನ್ನು ಕೊಟ್ಟರು.

ಕೊಡಗು ವಿದ್ಯಾಭಿವೃದ್ಧಿ ಸಂಘದ ವತಿಯಿಂದ ಈ ತಾ. 2ನೇ ಗುರುವಾರ ಮೆ. ಮಂಡೇಪಂಡ ಮಂದಣ್ಣ ಡಿಪ್ಯುಟಿ ಡೈರೆಕ್ಟರವರ ಅಧ್ಯಕ್ಷತೆಯಲ್ಲು ನಡೆದು, ಸಂಘಕ್ಕೆ ಸಾಲ ಮರುಪಾವತಿಯಾಗಲಿಕ್ಕಿರುವ ಮಹನೀಯರಿಂದ ಹಣದ ವಸೂಲಾತಿಗೆ ತ್ವರಿತವಾಗಿ ಕ್ರಮ ಜಂಗಿಸಬೇಕೆಂದೂ ಮತ್ತು ಸಂಘಕ್ಕೆ ಹಣ ಒದಗಿಸಲು ಮಾರ್ಚ್ 15ರಲ್ಲು ಒಂದು ನಾಟಕವನ್ನು ಅಭಿನಯಿಸುವಂತೆಯೂ ತೀರ್ಮಾನಿಸಲಾಯಿತು.

ದಕ್ಷಿಣ ಕೊಡಗಿನ ಶ್ರೀಮಂಗಲನಾಡು ಪುಚಿ ಗ್ರಾಮದಲ್ಲಿ ಬರುವ ಮಹಾ ಶಿವರಾತ್ರಿ ಸಮಯದಲ್ಲಿ ನಡೆಯುವ ಇರ್ಪು ಜಾತ್ರೆಗೆ ಪ್ಲೇಗ್ ಯಾ ವಾಂತಿ ಬೇಧಿ ತಗಲಿದ ಮೈಸೂರು ಯಾ ಇತರ ಪ್ರದೇಶಗಳಿಂದ ಬರುವ ಜನರನ್ನು ಸದರಿ ಸ್ಥಳದಲ್ಲಿ ಸೇರಲು ಬಿಟ್ಟರೆ ಪ್ಲೇಗ್ ಯಾ ವಾಂತಿಭೇದಿ ವ್ಯಾಪಿಸುವ ಅಪಾಯ ಉಂಟೆಂದು ಹಜರತ್ ಚೀಫ್ ಕಮಿಶನರು ತಿಳಿಯುವುದರಿಂದ 1891ನೇ ಇಸವಿಯ ಸಾಂಕ್ರಾಮಿಕ ರೋಗಗಳ ಆಕ್ಟಿಗನುಸಾರವಾಗಿ ತಾ. 21 ಮತ್ತು 22ರಲ್ಲು ಮೇಲ್ಕಂಡ ಜಾತ್ರೆಗೆ ಪ್ಲೇಗ್ ಯಾ ವಾಂತಿಭೇದಿತಗಲಿದ ಪ್ರದೇಶಗಳಿಂದ ಜನರು ಬರುವದನ್ನು ಈ ಮೂಲಕ ನಿರೋಧಿಸಿರುವರೆಂದು ತಿಳಿಯಪಡಿಸಿದೆ. ಇದಕ್ಕೆ ವಿರೋಧವಾಗಿ ಸದರಿ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥವರೆಲ್ಲರನ್ನೂ ಹಿಂದಕ್ಕೆ ಕಳುಹಿಸಲಾದೀತೆಂದು ಚೀಫ್ ಕಮಿಶನರವರ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಬೊಂಬಾಯಿಯ ಸೇಯಿಂಟ್ ಸ್ಟೇವಿಯರ್ ಕಾಲೇಜಿನಲ್ಲಿ ವಿದ್ಯಾವ್ಯಾಸಂಗ ಮಾಡುತ್ತಿರುವ ಮೆ. ಕೊಂಡಂಡ ಯಂ. ತಿಮ್ಮಯ್ಯನವರು ಈ ಮೊದಲು ಆರ್ ಇಂಡಿಯಾ ಇಂಡಿವಿಜುವಲ್ ಜೇಂಪಿಯನ್ ಶಿಪ್ ಕಪ್ಪನ್ನು ಪಡೆದುದಲ್ಲದೆ ಈ ವರ್ಷ ಅವರು ಬೊಂಬಾಯಿಯ ವಿದ್ಯಾ ನಿಲಯದ ಪಂದ್ಯಾಟದ ಇಂಡಿವಿಜುವಲ್ ಜೆಂಪಿಯನ್ ಕಪ್ಪನ್ನು ಸಹ ಪಡೆದಿರುವರು. ಇವರು ನೂರು ಗಜ ಓಟದಲ್ಲಿ ಎರಡನೆಯದಾಗಿಯೂ, 220 ಗಜ ಓಟದಲ್ಲಿ ಮೊದಲನೆಯದಾಗಿಯೂ. 440 ಗಜ ಓಟದಲ್ಲಿ ಎರಡನೆಯದಾಗಿಯೂ, 880 ಗಜ ಓಟ, ಒಂದು ಮೈಲು ಓಟ ಮತ್ತು ಮೂರು ಮೈಲು ಓಟದಲ್ಲಿಯೂ ಮೊದಲನೇಯದಾಗಿ (ಇವರಿಗೂ ಎರಡನೆಯವರಿಗೂ ಇದ್ದ ವ್ಯತ್ಯಾಸ 30 ಗಜ) ಬಂದು ಜೇಂಪಿಯನ್‌ಶಿಪ್ ಕಪ್ಪನ್ನು ಪಡೆದಿರುವರು. ಇದಲ್ಲದೆ ಇವರು ಅಲ್ಲಿನ ಕ್ರಿಕೆಟ್, ಹಾಕಿ ಮತ್ತು ಇತರ ಆಟಗಳಲ್ಲಿಯೂ ಉತ್ತಮ ದರ್ಜೆಯವರೆಂದು ಎನ್ನಿಸಿಕೊಂಡಿರುವದು ಸ್ತುತ್ಯಾರ್ಹವಾಗಿದೆ.

ಹಿಂದೂದೇಶ.

ಬೊಂಬಾಯಿಯಲ್ಲಿ ಲೇಡಿ ಡಾಕ್ಟರ್ ಪ್ರೇಮ ಬಾಯಿಯವರನ್ನು ತಿವಿದು ತಪ್ಪಿಸಿಕೊಂಡಿದ್ದ ಡ್ರೈವರ್ ನಾರಾಯಣ ಲಕ್ಷ್ಮಣನಿಗೆ 8 ತಿಂಗಳ ಕಠಿಣ ಸಜೆ ವಿಧಿಸಲಾಗಿದೆ.

ದಿಲ್ಲಿಯಲ್ಲಿದ್ದ ಲಂಡನ್ ಟೈಮ್ಸ್ ಪತ್ರಿಕೆಯ ಪ್ರತಿನಿಧಿಗಳಾಗಿದ್ದ ಪೀಟರ್‌ಸನ್ ಎಂಬವರು ಗೃಹತಾಪತ್ರಯದಿಂದ ಗುಂಡು ಹೊಡೆದು ಆತ್ಮಹತ್ಯೆಮಾಡಿಕೊಂಡರು.

ಮದ್ರಾಸಿನಲ್ಲಿ 27—1—33ನೇ ದಿನ ಮೂರ್ ಮಾರ್ಕೇಟಿನ ಬಳಿ ಕಾಂಗ್ರೆಸ್ ಸ್ವಯಂ ಸೇವಕರು ಮೆರವಣಿಗೆಮಾಡಿದವರನ್ನು ಬೆತ್ತದಿಂದ ಹೊಡೆದು ಚದರಿಸಿದರು ಮತ್ತು ಅನೇಕರನ್ನು ಖೈದುಮಾಡಿದ್ದಾರೆ.

ತಾ. 24—1—33ರಲ್ಲಿ ಕರಾಚಿಯಲ್ಲಿ ಎಲ್ಫಿನ್‌ಸ್ಟನ್ ರಸ್ತೆಯಲ್ಲಿರುವ ಕಾಹನ್ ಕಂಪೆನಿಯ ಕಟ್ಟಡಕ್ಕೆ ಬೆಂಕಿ ಬಿದ್ದು ಇಡೀ ಕಟ್ಟಡವೇ ಸುಟ್ಟುಹೋಗಿ ರೂ. 300,000 ನಷ್ಟವಾಗಿದೆಯೆಂದು ತಿಳಿಸುಬರುತ್ತದೆ.

ಲಾಹೋರಿನ ಜಾಮೀನುದಾರನೊಬ್ಬನು ತನ್ನ ಕಣ್ಣೆದುರಿಗೆ ತನ್ನ ತಂಗಿಯು ಅತ್ಯಾಚಾರ ಮಾಡಿದ್ದನ್ನು ಕಂಡು ತಡೆಯಲಾರದೆ ಕೋಪದಿಂದ ಅವಳನ್ನು ಕೊಂದು ಹಾಕಿದ್ದಕ್ಕಾಗಿ 5 ವರ್ಷ ತಿಕ್ಷೆಗೆ ಗುರಿಯಾಗಿರುವನು.

ಚಿನೂಬಂದ ಒಂದು ತೋಟದಲ್ಲಿ ಒರೇ 14 ಇಂಚು ಎತ್ತರವೂ 2 ಇಂಚು ವ್ಯಾಸವುಳ್ಳ ಬೆಂದು ಬಿಕ್ಕಬಾಳೆ ಗಿಡವು ಗೊನೆಯ ಬಿಟ್ಟಿದೆ ಆ ಗೊನೆಯಲ್ಲಿ 4 ಇಂಚು ಉದ್ದವಿರುವ ಈಗ ಅದನ್ನು ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಇಟ್ಟಿರುವರು.

ಬೊಂಬಾಯಿ ವಿಧಾನಸಭೆಯ ಮುನ್ಸಿಪಾಲಿಟಿಯಲ್ಲಿಯೂ ಮತ್ತು ಲೋಕಲ್ ಬೋರ್ಡುಗಳಲ್ಲಿಯೂ, ಹರಿಜನರು ಮತ್ತು ಹಿಂದುಗಳಲ್ಲಿ ಯಾವ ತರಹ ಬೇಧವನ್ನು ಎಣಿಸಬಾರದೆಂದು ಹುಕುಂ ಒಂದನ್ನು ಬೊಂಬಾಯಿ ಸರಕಾರದವರು ಕೊಟ್ಟಿರುವರು.

ಬರೋಡ ಸಂಸ್ಥಾನದಲ್ಲಿ ಹೊಸ ಖಾನೂನು ಜಾರಿಗೆ ಬಂದಿದೆ 18 ವರ್ಷ ಪೂರ್ತಿಯಾಗದ ಹೆಣ್ಣನ್ನು 40 ವರ್ಷ ವಯಸ್ಸಿನ್ನಳ್ಳ ಪುರುಷನು ಮದುವೆಯಾಗಕೂಡದೆಂದೂ ಮತ್ತು ಹಾಗೆ ಅತಿಕ್ರಮಿಸಿದ್ದಲ್ಲಿ 6 ತಿಂಗಳ ಸಜೆ ಮತ್ತು 500 ರೂ. ಜುಲ್ಮಾನೆ ತಿಕ್ಷೆಗೆ ಗುರಿಯಾಗುತ್ತಾರೆ.

ಬರ್ಮಾದ ಉತ್ತರಭಾಗದಲ್ಲಿ ಒಂದು ಹೊಸ ರೋಗವು ತಲೆಯೆತ್ತಿದೆ. ಮೂರು ದಿನ ಜ್ವರ, ನಾಲ್ಕನೇ ದಿನ ಕೈಗಳ ಮೇಲೆ ಮಾತ್ರ ಕಜ್ಜಿ. ಅನಂತರ ಮೈ ಬಣ್ಣವು ವಿಚಿತ್ರವಾಗಿ ಬದಲಾಯಿಸುವುದು ಅನಂತರ ಮರಣವುಂಟಾಗುವುದು. ಇದನ್ನು ಅನೆ ರೋಗವೆಂದು ಕರೆಯುತ್ತಾರೆ.

ಅಸ್ಪೃಶ್ಯತಾ ನಿವಾರಣೆಯ ವಿಷಯವಾಗಿ ಮದ್ರಾಸಿನ ನ್ಯಾಯವಿದಾಯಕ ಸಭೆಗೆ ಡಾ. ಸುಬ್ಬರಾಯನ್ ಮತ್ತು ಶ್ರೀ ರಂಗಯ್ಯನವರು ತಂದ 2 ಬಿಲ್ಲುಗಳ ಪೈಕಿ, 2ನೇ ಬಿಲ್ಲನ್ನು ಸರ್ಕಾರದವರು ಮಂಜೂರುಮಾಡಿದರು. ರಂಗ ಅಯ್ಯರವರ ಬಿಲ್ಲು ಜರ್ಜಿಗೆ ಬಂದು ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ದೇವಸ್ಥಾನದ ಸಂಕಷ್ಟಗಳು ನಿವಾರಿಸಲ್ಪಡುವುವು

ಈಗ ಇಂಗ್ಲೆಂಡಿನಲ್ಲಿರುವ ಡಾ ಅನ್ಸಾರಿಯವರು ಸಂಪೂರ್ಣ ಗುಣ ವಂಚಿತ ಹೊಂದುತ್ತಿರುವರೆಂದೂ, ಶೀಘ್ರದಲ್ಲೇ ಇಂಡಿಯಾಕ್ಕೆ ಹಿಂತಿರುಗುವರೆಂದೂ, ಡಾಕ್ಟರುಗಳ ಸಲಹೆ ಪ್ರಕಾರ ಇನ್ನು ಮುಂದೆ ರಾಜಕಾರಣ ಕ್ಷೇತ್ರದಿಂದ ನಿವೃತ್ತರಾಗುವರೆಂದೂ ತಿಳಿದು ಬರುತ್ತದೆ. ವೈದ್ಯಕೀಯ ಸಂಬಂಧವಾದ ಒಂದು ಪುಸ್ತಕವನ್ನು ಡಾ. ಅನ್ಸಾರಿಯವರು ಬರೆದಿರುವರೆಂದೂ, ಅದು ಇಷ್ಟರಲ್ಲಿಯೇ ಪ್ರಕಟವಾಗುವುದೆಂದೂ ಹೇಳಲಾಗಿದೆ.

ಶ್ರೀ ಶಂಕರಾಚಾರ್ಯರ ವಂಶಜ ಸೆಕ್ರೆಟರಿಗಳೆಂದು ಹೇಳಿಕೊಳ್ಳುವ ಮೆ. ಬಿ. ಕೆ ಹಡಕರ ಎಂಬಾತನು ದೇವಸ್ಥಾನ ಪ್ರವೇಶ ವಿಷಯವನ್ನು ಪ್ರಚಾರ ಮಾಡಕೂಡದೆಂದು ತಡೆಯುವಂತೆ ಮಹಾತ್ಮಗಾಂಧಿ ಶ್ರೀ ರಾಜಗೋಪಾಲಾಚಾರಿ, ಶ್ರೀ ಥಕ್ಕರ್, ಎಂಬವರ ಮೇಲೆ ಅಲ್ಲಿನ ಫಸ್ಟ್ ಕ್ಲಾಸ್ ಸಬ್‌ಜಡ್ಜರ ಕೋರ್ಟಿನಲ್ಲಿ ಒಂದು ದಾವ ತಂದು ಅದು ಕೋರ್ಟಿನವರಿಂದ ಅಂಗೀಕರಿಸಲ್ಪಟ್ಟಿರುವುದು. ವಿಚಾರಣೆ ತಾರೀಕು ಇನ್ನೂ ತಿಳಿದು ಬಂದಿಲ್ಲ. ಅಲ್ಲದೆ ಪಂಡಿತ ಮಾಳವೀಯರವರನ್ನು ಪ್ರತಿವಾದಿಗಳ ಪಟ್ಟಿಯಲ್ಲಿ ಸೇರಿಸಬೇಕೆಂದೂ ಕೇಳಿರುವರು.

ವಿದೇಶ.

ಉತ್ತರ ಚೀನದ ಒಂದು ಕೋಟೆಯಲ್ಲಿ 380 ಮಂದಿ ಚೀನಿಯರು ಕೋವಿ ಹಿಡಿದು ನಿಂತಿದ್ದವರು ಚಳಿಯಿಂದ ಸತ್ತು ಹೋದರೆಂಬ ವರ್ತಮಾನವು ತಿಳಿದುಬಂದಿದೆ.

ಇಂಗ್ಲೆಂಡಿನ ಈಶಾನ್ಯ ಭಾಗದಲ್ಲಿ ದೊಡ್ಡ ಭೂಕಂಪ ಉಂಟಾಗಿ ಅನೇಕ ಮನೆಗಳು ಮುರಿದು ಬಿದ್ದು ಹೋದವು. ಆದರೆ ಜನರಿಗೇನೂ ಅಪಾಯ ಉಂಟಾಗಲಿಲ್ಲ.

ಇಂಗ್ಲೆಂಡಿನಲ್ಲಿ ವಿಷ ವಾಯು ಪ್ರಯೋಗದಿಂದ ರಕ್ಷಣೋಪಾಯವನ್ನು ಜನರಿಗೆಲ್ಲಾ ಕಲಿಸಿಕೊಡುವ ಪ್ರಯತ್ನ ನಡೆದಿದೆ. ಈಗಾಗಲೇ 80 0 ಮಂದಿ ಸ್ತ್ರೀಪುರುಷರು ತರಬೇತಾಗಿದ್ದಾರೆ.

ಜಪಾನಿನಲ್ಲಿ ಕ್ಯಾಂತಿಯನ್ನುಂಟು ಮಾಡುವ 2000 ಜನರನ್ನು ಕೈದು ಮಾಡಿರುತ್ತಾರೆ. ಶ್ರೀಮಂತ ಮನೆತನದವರು ಮತ್ತು ತರುಣ ತರುಣಿಯರು ಕಳೆದ ವರ್ಷ 7000ಕ್ಕಿಂತಲೂ ಹೆಚ್ಚಾಗಿ ದಸ್ತಗಿರಿ ಮಾಡಲ್ಪಟ್ಟಿದ್ದರು.

ಹಿಮಾಲಯದ ಗೌರಿಶಂಕರ ಶಿಖರವನ್ನೇರಲು ಲಂಡನಿನಲ್ಲಿ ವಿಮಾನಸಿದ್ಧವಾಗಿ ಅನೇಕ ಜನ ಸಾಹಸಿಗಳು ಹೊರಟಿರುವರು. ಈ ವಿಮಾನವು ಚಾಲಕರನ್ನೂ, ಫೋಟೋ ಗ್ರಾಫರನ್ನೂ, ಸಿನೇಮಾ ಕ್ಯಾಮರಾಗಳನ್ನೂ, ಅನ್ನು ಜನಕವನ್ನೂ ಹೇರಿ 80 ನಿಮಿಟುಗಳಲ್ಲಿ 3700 ಅಡಿಗಳಷ್ಟು ಮೇಲಕ್ಕೆ ಏರಬಹುದೆಂದು ತಿಳಿದು ಬಂದಿದೆ. ಗೌರಿಶಂಕರವು 29000 ಅಡಿಗಿಂತ ಹೆಚ್ಚಾಗಿ ಎತ್ತರವಿಲ್ಲ. ಈಗ ಪರೀಕ್ಷೆಗಾಗಿ ಇಂಗ್ಲೆಂಡಿನಲ್ಲಿಯೂ ಹಾರಾಡುತ್ತಿರುವುದು.

ನೋಟೀಸು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಇದರ ಆಫೀಸಿನಿಂದ.

ಈ ಬ್ಯಾಂಕಿನ ಜನರಲ್ ಮೀಟಿಂಗ್. ತಾ. 26—2—1933ನೇ ಆದಿತ್ಯವಾರ ದಿನ ಮಧ್ಯಾಹ್ನ 1 ಗಂಟೆಗೆ ಮಡಿಕೇರಿಯಲ್ಲಿ ಜವಾನ್ದಾರರ ಸಂಘದ ಹಾಲ್‌ನಲ್ಲಿ ನಡೆಯುತ್ತದೆ. ಇದಕ್ಕೆ ಸಂಘದ ಒಬ್ಬ ಪ್ರತಿನಿಧಿಯನ್ನು ಕಳುಹಿಸಿಕೊಡಬೇಕೆಂದು ಕೋರಲಾಗಿದೆ.

ಚರ್ಚಿಸತಕ್ಕ ವಿಷಯಗಳು.

1. ಡೈರೆಕ್ಟರುಗಳ ರಿಪೋರ್ಟು ಮತ್ತು ಲಾಭ ಹಾಜು ನಿಲೆ.
2. ಡೈರೆಕ್ಟರುಗಳ ಮತ್ತು ಆಫೀಸ್ಸರ ಚುನಾವಣೆ
3. ಸಂಘಗಳ ಮೇಲ್ವಿಚಾರಣೆ ಮತ್ತು ದೈವ್ಯ ಸಹಾಯಗಳ ಬಾಬಿನಲ್ಲಿ ಬ್ಯಾಂಕಿನ ಬೈಲಾ ನಂಬರು 4. 28 31. 32. 33. 35. 36. 37. 38. 39. ಮತ್ತು 47ರ ತಿದ್ದುಪಡಿ.
4. 1932—33ನೇ ಸಂವತ್ಸರದ ಆದಾಜು ಬಡ್ಜೆಟ್.
5. ಅಧ್ಯಕ್ಷರ ಅನುಮತಿ ಮೇರೆ ಇತರ ತುರ್ತಿನ ವಿಷಯಗಳು.
6. ತಿಂಡಿ ತೀರ್ಥಗಳು.

ಸಂಘದಿಂದ ಬ್ಯಾಂಕಿನ ಪ್ರತಿನಿಧಿಯಾಗಿ ಯಾರನ್ನು ಆಯ್ಕೆಮಾಡಿದ್ದೀರೆಂಬುದನ್ನು ತಾ. 25—2—1933ರ ಒಳಗೆ ನಮಗೆ ತಿಳಿಸಬೇಕಾಗಿ ಕೋರುತ್ತೇನೆ ಹಾಗೆ ಎಜಿಟೇಂಗಿಗೆ ಬರುವ ಪ್ರತಿನಿಧಿಗಳ ಹೆಸರನ್ನು ತಿಳಿಸದಿದ್ದರೆ ಎಜಿಟೇಂಗಿನ ದಿನ ಬಂದ ಪ್ರತಿನಿಧಿಗೆ ಎಜಿಟೇಂಗಿನ ಕಾರ್ಯದಲ್ಲಿ ಭಾಗ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ.

ಮಡಿಕೇರಿ, 31—1—1933. ಯಂ. ಯಂ. ಬೆಳ್ಯಪ್ಪ, (ಗೌರವ ಕಾರ್ಯದರ್ಶಿ.)

ತಾಯಿಯ ಪ್ರೇಮ.

ಒಂದು ಚಿಕ್ಕ ದೃಶ್ಯ.

(ಯು. ಯಂ. ಜಿ. ಯವರಿಂದ)

ನನ್ನ ತಾಯಿಗೆ ನನ್ನಲ್ಲಿ ತುಂಬಾ ಪ್ರೇಮ. ಅವಳ ಸಮ್ಮತಿಗಳೆಲ್ಲಾ ಗೊಡ್ಡಾದರೂ ಅವಳ ಪ್ರೀತಿಯು ಗೊಡ್ಡಾಗಿಲ್ಲ. ನನ್ನ ಆಯುಸ್ಸಿನ ಪರಿಮಿತಿಯನ್ನು ನೆನೆನೆನೆದು ಜೋಯಿಸನು ಗಣಿತ ಮಾಡಿ ಹೇಳಿದುದರಲ್ಲಿ ಅವಳಿಗೆ ಬಲು ಸಂಚಿಕೆ. ನನ್ನ ಇಪ್ಪತ್ತನೆಯ ವಯಸಿನಲ್ಲಿ ನನ್ನ ಪ್ರಾಣಕ್ಕೆ ಅಪಾಯವಿತ್ತೆಂದು ಆ ಜೋಯಿಸನಿಗೆ ಅದು ಹೇಗೋ ತಿಳಿದು ಬಿಟ್ಟಿತ್ತು. ಹೋಮ ಸಮಯ ಪ್ರಾಣಾಪಾಣಗಳಿಂದ ನನ್ನ ಅಮ್ಮನು ನನ್ನನ್ನು ಮೃತ್ಯುವಿನ ಬಾಯಿಯಿಂದ ತಪ್ಪಿಸಿಯೇ ಬಿಟ್ಟಳಂತೆ! ನನ್ನ ವಿಧಿಯೇ, ನಾನು ಈ ರಾತ್ರಿ ಕಥೆಯನ್ನು ಬರೆಯಬೇಕೆಂದು ಮೊದಲೇ ನಿಶ್ಚೈಸಿತ್ತೆಂದೂ ಅದುದರಿಂದಲೆ ನಾನು ಓದುಕಿದ್ದಿನೆಂದೂ ನನ್ನವಾದ. ಜೋಯಿಸನ ಹೇಳಿಕೆಯು ಮೀರಿ ನೂಡಿದ ಶಪಶ್ಚರ್ಯದಿಂದಲೇ ಮೃತ್ಯುವು ನನ್ನನ್ನು ಒಯ್ಯಲು ಹೆದರುತೆಂದು ಅಮ್ಮನ ಅಚಲವಾದ ನಂಬಿಕೆ. ಅಂತೂ ಇಂತು ಸಮ್ಮ ಜೋಯಿಸರಿಗೇನೋ ಹಬ್ಬವಾಯಿತು. ಅವೆಲ್ಲ ಹೇಗಾಗಲಿ; ನನ್ನ ಅಮ್ಮನಿಗಾದ ಮನಶ್ಶಾಂತಿಯೇ ನನಗೆ ಮುಖ್ಯ.

ಆದರೆ ಅಮ್ಮನ ಹರಿಕೆಯು ಅಲ್ಲಿಗೇ ಮುಗಿಯಲಿಲ್ಲ. ದೇಸಿಗೆಯ ರಜದಲ್ಲಿ ಸುಖವಾಗಿ ಮನೆಗೆ ತಲಪಿದರೆ ಸುಬ್ರಹ್ಮಣ್ಯಕ್ಕೆ ನನ್ನನ್ನು ಕರೆದುಕೊಂಡು ಹೋಗಿ ಅವೇನೋ ತುಲಾಭಾರವಂತಲ್ಲ! ಅವನ್ನು ದೇವರಿಗೊಪ್ಪಿಸುವದಾಗಿ ಹರಿಕೆ ಮಾಡಿಯೇ ಬಿಟ್ಟಿದ್ದಳು. ನನಗೆ ಅದನ್ನು ಕೇಳಿದೊಡನೆ ಕೋಪವು ಬಂತ. ಮದ್ರಾಸಿನಂಥ ಪಟ್ಟಣದಲ್ಲಿ ಜನರ ಗಲಾಟೆ ಕಡಿಮೆಯೇ? ಅಲ್ಲಿಗೆ ಹೋಗಿ [illegible]

ಸುಖವನ್ನನುಭವಿಸೋಣವೆಂದರೆ ಮನೆಯಲ್ಲಿಯೇ ಇನ್ನೂ ನಾಲ್ಕು ದಿನ ಹೆಚ್ಚು ಇರಲು ಒಲ್ಲಳು. ಅದೆಲ್ಲಿಂ ಸುಬ್ರಹ್ಮಣ್ಯಕ್ಕಂತೆ ಜನರ ಗೊಂದಲಿಗೆ ಪುನಹ ಹುಯ್ಯುವಳು. ಇಷ್ಟೇ ನನ್ನ ಕೋಪಕ್ಕೆ ಕಾರಣ. ಮದ್ರಾಸಿನ ಗಲಭೆಯನ್ನು ಅರಿಯದೆ, ಟ್ರೈಲಿನಲ್ಲಿ ಪ್ರಯಾಣ ಮಾಡಿದ ಆಕೆಗೆ ನನ್ನ ಮನಸಿನ ಆಗಿನ ಸ್ಥಿತಿಯನ್ನು ಹೇಗೆ ಅರಿಯುವಳು? ಪಾಪ; ನಾನಾದರೂ ಸಹಿಸಬಹುದಾಗಿತ್ತು. ಲೋಕದ ಅನುಭವ ಕಡಿಮೆಯಾದ್ದರಿಂದ ರೇಗಿ ಬಿಟ್ಟೆ. ಈಗಲೂ ನನ್ನ ಮನಸು ನೋಯುತ್ತಿದೆ. ನನ್ನ ತಾಯಿಯ ಮನಸನ್ನು ಅಲ್ಪ ವಿಷಯಕ್ಕೆ ನೋಯಿಸಬಾರದಾಗಿತ್ತೆಂದು; ಏನು ಮಾಡಲಿ? ಕಾರ್ಯವು ಮಿಂಚಿದ ಮೇಲೆ ಬುದ್ಧಿಯು ಬಂದಿತು. ಅಮ್ಮನು ಅತ್ಯುಕೊಂಡು ಮನೆಯೆಲ್ಲಾ ಬೊಬ್ಬೆಯಿಂದ ತುಂಬಿಸಿಬಿಟ್ಟಳು. ನಾನು ಆಕೆಯೊಡನೆ ಹೊಡಾಡುವ ವರಗೂ ಊಟವೇ ಬೇಡವೆಂದು ಅಸಹಕಾರ ಮಾಡಿದಳು. ಗಾಂಧಿಯವರ ವಿಷಯ ಆಕೆಯು ಹೆಚ್ಚೇನು ತಿಳಿಯಲು ಕಷ್ಟಪಡದಿದ್ದರೂ ಅವರ ಉಪವಾಸದ ಪ್ರಭಾವವನ್ನು ಹೇಗೋ ತಿಳಿದು ಬಿಟ್ಟಿದ್ದಳು. ಅದೂ ಜೋಯಿಸನ ಭೇಷ್ಟೆಯೆಂದು ಆತನ ಮೇಲೆ ರೇಗಿದೆ. ಎಷ್ಟು ರೇಗಿದರೇನು? ಪಂಜರದೊಳಗಿನ ಸಿಂಹದ ಆರ್ಭಟಿಯಂತೆ ನನ್ನ ಸಿಟ್ಟಿಗೆ ಹೆದರುವವರೇ ಅಲ್ಲಿರಲಿಲ್ಲ. ನನ್ನ ಹಠವನ್ನು ಸಾಧಿಸಿಬಿಡೋಣವೆಂದರೆ, ಅಮ್ಮನ ಗುಣ ನನಗೆ ಗೊತ್ತು. 'ಒಲಿದರೆ ನಾರಿ, ಮುನಿದರೆ ಮೂರಿ' ಎಂಬ ಗಾದೆಯ ಅನಳಿಗಾಗಿಯೇ ಹೊರಟಂತಿತ್ತು. ಮದ್ರಾಸಿಗೆ ಹೋಗಿ ಇಂಗ್ಲಿಷ್ ಓದಿಯೇ ಮಗ ಕೆಟ್ಟು ಹೋದನೆಂದು ಜೋಯಿಸನಿಗೆ ನನ್ನ ಜಾತಕದಿಂದ ಗೊತ್ತಾಗಿಬಿಟ್ಟರೆ ಬಿತ್ತು ನನ್ನ ಮುಂದಿನ ಡಿಗ್ರಿಗಳಿಗೆಲ್ಲಾ ಸೊನ್ನೆ. ಅಮ್ಮನನ್ನು ಸಂತೋಷಪಡಿಸುವುದೇ ಒಳ್ಳೆಯದೆಂದು ಕೂಡಲೇ ಹೊಳೆಯಿತು. ಸುಬ್ರಹ್ಮಣ್ಯಕ್ಕೂ ಹೊರಟೆ. ಅಮ್ಮನು ಉಪವಾಸ ಮಾಡಿದ ಹೊತ್ತುಗಳ ಊಟವನ್ನೆಲ್ಲಾ ಲೆಕ್ಕ ಹಾಕಿ ಎಲ್ಲವನ್ನೂ ಊಟ ಮಾಡಿಬಿಟ್ಟಳು. ಈಗ ಯೋಚಿಸಿದರೆ ಜುಮ್ಮೆನ್ನುತ್ತದೆ. ಈಗ ತಿಳಿದುಕೊಂಡೆ; ಸ್ವಲ್ಪ ವಿಷಯಕ್ಕೆ ತುಂಬಾ ದೆಲೆ ಕೊಟ್ಟು ಅಮ್ಮನ ಕೋಪಕ್ಕೆ ಪಾತ್ರನಾಗಿದ್ದರೆ ಆಕೆಯು ಕೊಟ್ಟ ಹಣದ ಬಲದಿಂದ ಸಂಪಾದಿಸಿದ ನನ್ನ ಡಿಗ್ರಿಗಳಿಗೆಲ್ಲಾ ಏನು ಗತಿಯಾಗುತ್ತಿತ್ತೆಂದು.

ಅಮ್ಮನಿಗೆ ಈಗ ನನ್ನ ಮದುವೆಯ ಯೋಚನೆ. ನನಗೇನೋ ಡಿಗ್ರಿಗಳನ್ನು ಉಪಯೋಗಿಸುವ ವರ್ಗವನ್ನು ಕಂಡು ಹಿಡಿಯುವ ಯೋಚನೆ. ಕಾಲೇಜಿನಲ್ಲಿ ಅದನ್ನೆಲ್ಲಾ ಕಲಿಸಲೇ ಇಲ್ಲ. ಮದುವೆಯ ವಿಷಯದಲ್ಲಿ ನನಗೂ ನನ್ನ ಅಮ್ಮನಿಗೂ ಪುನಹ ವಾಗ್ಯುದ್ಧ ಒದಗುವ ಭಯವಿದೆ. ಅದೇ ಯೋಚನೆಯಿಂದರಾತ್ರಿ ನಿದ್ರೆ ಬರಲಿಲ್ಲ. ಸಮಯ ಕಳೆಯೋಣವೆಂದು ರಾತ್ರಿಯೇ ಕುಳಿತು ಬರೆಯತೊಡಗಿದೆ. ಪುನಹ ನಿದ್ದೆಗೆ ನನ್ನ ನೆನಪಾದಂತಿದೆ. ನಿದ್ರಾದೇವಿಯನ್ನು ಮದುವೆಯಾಗಿಬಿಟ್ಟಿನೆಂದರೆ ನಾನು ಆರಿಸಿದ ಹೆಣ್ಣಲ್ಲವೆಂದು. ಎಲ್ಲಿ ಅಮ್ಮನು ನನ್ನನ್ನು ಪುನಹ ಮದುವೆಯಾಗು ಎಂದು ಪೀಡಿಸುವಳೋ ಏನೋ?

ನನ್ನ ಮುಂದಿನ ಯೋಗ ಕ್ಷೇಮ ತಿಳಿಯುವ ಕುತೂಹಲ ನಿಮಗೂ ಇದ್ದರೆ ಪುನಹ ಬಯಸುವೆನು.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಎಚ್ಚರಿಕೆ.

ಮಲಬಾರಿನಲ್ಲಿ ಅಸ್ಪೃಶ್ಯರಿಗೆ ಶಾಲೆಗಳನ್ನು ತೆರೆಯುವ ಉದ್ದಿಶ್ಯ ಚಂದಾ ವಸೂಲಾತಿಗಾಗಿ ತನ್ನನ್ನು ಈ ಕಡೆ ಕಳುಹಿಸಿರುತ್ತಾರಾಗಿ ಒಬ್ಬ ಮೆ. ಎನ್. ಕೆ. ಜಾರ್ಜ್ ಎಂಬವರು ಕೆಲವು ಮಲೆಯಾಳ ಭಾಷೆಯ ವರ್ತಮಾನ ಪತ್ರಿಕೆಯ ಚುಂಡುಗಳನ್ನು ಒಂದು ಚಿಕ್ಕ ನೋಟು ಬುಕ್ಕನ್ನೂ ಹೊತ್ತುಕೊಂಡು ಈ ಕಡೆ ತಿರುಗಾಡುತ್ತಿದ್ದಾರೆ. ಹಲವರು ಇವರಿಗೆ ಚಂದವನ್ನು ಕೊಟ್ಟಿರುತ್ತಾರೆ. ಕೊಟ್ಟವರ ಹೆಸರು ದಸ್ಕತ್ತು ಮೊಬಲಗನ್ನು ಆ ನೋಟು ಬುಕ್ಕಿನಲ್ಲಿ ತೆಗೆದುಕೊಂಡಿರುತ್ತಾರೆ ರಸೀತಿಗಳು ಇಲ್ಲ. ಇವರು ಮೇಲಿನ ಉದ್ದಿಶ್ಯಕ್ಕಾಗಿ ಚಂದಾ ವಸೂಲು ಬಗ್ಗೆ ನಿಜವಾಗಿಯೂ ಕಳುಹಿಸಲ್ಪಟ್ಟವರೋ ಎಂದು ಸದ್ಯಕ್ಕೆ ವರ್ತಮಾನ ಪತ್ರಿಕೆಗಳ ಮೂಲಕ ತಿಳಿಯುವ ವರೆಗೆಯಾದರೂ ಇವರಿಗೆ ಚಂದಾ ಕೊಡಬಾರದಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ. ಐ. ಪಿ. ಮೂದಪ್ಪ.

ಪರಿ.

ಮಹನೀಯರೇ,

ಪರಿಯ ವಿಷಯ ಅನೇಕಾನೇಕ ಬಾತ್ಮಿಗಳು ಹೊರಬಿದ್ದಿರುವುದರಿಂದ ಅನೇಕರು ಇಂಥಾ ಬಾತ್ಮಿಗಳನ್ನು ಓದಲೇ ಒಪ್ಪರು. ನನಗೂ ಅಂತೆಯೇ ಆಗಿದೆ. ಆದರೂ ಬರೆಯದೆ ನಿರ್ವಾಹವಿಲ್ಲ. ಹೊಸ ಪರೆಯು ಬಂದು ಬಟವಾಡೆ ಆಯಿತು. ಅದರ ಖಾನೂನು ಖಾಯಿದೆಗಳೇನೆಂದು ಶೇಕಡ 99 ಜನರಿಗೆ ಗೊತ್ತಿಲ್ಲ. ನಿರಕ್ಷು ಪರೆಯೊದ್ದರಿಂದ ವ್ಯಾಪಾರಸ್ಥರಿಗೆ ಬಹಳ ಕಷ್ಟ ತೋರಿದೆ. ಸರ್ಕಾರದವರು ಒಂದು ಗಾಡಿ ಭತ್ತಕ್ಕೆ ಎಷ್ಟು ಪರೆ ಭತ್ತವೆಂಬುದು ತಿಳಿಸದಿರುವದು ಒಂದು ದೊಡ್ಡ ಕೊರತೆ. ವ್ಯಾಪಾರಿಗಳು ಗಾಡಿ 1ರ 135 ಪರೆ ಎಂದು ಹೇಳಿ ಅನೇಕರಿಂದ ಈಗಾಗಲೇ 135 ಪರೆಯಂತೆ ಅಳೆದು ತೆಗೆದಿರುವರು. ಇನ್ನೂ ತೆಗೆಯುತ್ತಿರುವರು. ಕೆಲವರಿಂದ ಗಾಡಿ 1ಕ್ಕೆ 120 ಪರೆಯಂತೆ ತೆಗೆದುಕೊಂಡು ಗಾಡಿಗೆ ಭರ್ತಿ ಸಾಲದೆಂದು ಪುನಃ 16 ಪರೆಗಳನ್ನು ಹೆಚ್ಚಾಗಿ ಕೈಯ ಕೊಟ್ಟು ತೆಗೆದುಕೊಂಡು ಪ್ರತಿ ಒಬ್ಬರಲ್ಲೂ ಪಲಾನೆ ಮನುಷ್ಯರು 136 ಯೂ 135 ಪರೆ ಭತ್ತಕ್ಕೊಪ್ಪದೆಯೆಂದು ಹೇಳುತ್ತಾ ಬೇರೆಯವರನ್ನು ಮೋಸಪಡಿಸುತ್ತಿರುವರು.

ಹೊಸ ಪರೆಯು ಚಿಕ್ಕದಲ್ಲ. ಸೂಕ್ಷ್ಮವಾಗಿ ಪರೆಯನ್ನು ಅಳ್ತಾಡಿಸದೆ ಭರ್ತಿ ಮಾಡಿ ತಲೆ ಸವರಿದರೆ 10½ ಸೇರು ಭತ್ತ ಹಿಡಿಯುತ್ತದೆ. ಪರೆಯನ್ನು ಅಲ್ತಾಡಿಸಿ ತಲೆ ಸವರುವ ಕೋಲಿನಿಂದ ಅದುಮಿ ನಮ್ಮ ಸಾಹುಕಾರರುಗಳ ಹಳೇ ನಮೂನೆಯಲ್ಲಿ ಅಳೆದರೆ 11ಸೇರು ಭತ್ತ ಖಂಡಿತ ಆಗುತ್ತದೆ.

ಅಲ್ಲದೆ ಸರ್ಕಾರದವರು ನಿರಖು ಪರೆ ಮಾಡಿಸಿದ್ದಾದರೂ ಗಾಡಿ 1ಕ್ಕೆ 120 ಪರೆ ಕೊಡಲಂ ಎಂದೇ ಆಗಿದೆ. ಇದರ ಬದಲು ನಾವು 135 ಪರೆ ಕೊಟ್ಟರೆ ಹೊಸ ಪರೆ ಜಾರಿಗೆ ತಂದದ್ದರ ಫಲವಾದರೂ ಏನು ಮತ್ತು ಎಂದಿನಂತೆ ಅದುಮಿ ಅಳೆಯುವುದರಿಂದ ಮೊದಲಿನ ಪರೆಯಾದ ಆಗುತ್ತಿದ್ದದಕ್ಕಿಂತಲೂ ನಷ್ಟ ಜಾಸ್ತಿಯಾದಂತಾಯಿತು.

ಗಾಡಿ 1ರ 135 ಪರೆ ಒಮ್ಮೆ ಜಾರಿಯಾಗಿ ಬಿಟ್ಟರೆ ನಂತರ ಕೆಲವು ಸಮಯಗಳಲ್ಲೇ ಗಾಡಿ 1ರ ಪರೆಗೆ ಎಷ್ಟೆಂಬ ಪ್ರಶ್ನೆಯೇ ನಿಂತು ಹೋಗಿ ಕಡೆಗೆ ಎಂದೆದಿಗೂ ಗಾಡಿ 1ಕ್ಕೆ 135 ಪರೆಯೇ ಕೊಡಬೇಕಾಗಿ ಬರುತ್ತದೆ. ಇದಕ್ಕೆ ಬದಲು ಗಾಡಿ 1ರ ಪರೆ 120 ಎಂಬುದನ್ನು ಜಾರಿಗೆ ತಂದರೆ ಬೆಲೆ ಮೊತ್ತ ಆಯಾ ಕಾಲಕ್ಕೆ ಸರಿಯಾಗಿ ಏರಿ ಇಳಿಯುತ್ತಿರಬಹುದು. ರೂ. 1ಕ್ಕೆ 16 ಆಣೆಯೇ ಇರಲಿ, ಅದಕ್ಕೆ ತಕ್ಕ ಮೂಲು ಕಾಲಗುಣಕ್ಕೆ ಸರಿಯಾಗಿ ಸಿಕ್ಕುತ್ತಿರಲಿ ಆಣೆಯ ಸಂಖ್ಯೆಯನ್ನು ವ್ಯತ್ಯಾಸ ಮಾಡುವದು ಬೇಡ.

ಕೈ ಬೆರಳೆಣಿಕೆಯವರಿಗೆ ಖಾನೂನು ಮೂಲಕ ತಿಳಿಸಿ ಇರುವಾಗ ನ್ಯಾಯ ತಪ್ಪಿ ಬಡ ಜನರಿಂದ ತಗೆಯುತ್ತಿರುವ ಈ ಸುಲಿಗೆಗೆ ಈ ಹಗಲು ಸುಲಿಗೆಗೆ ತಿಳಿಸಿಗೆ ಖಾನೂನಿನ ಅವಕಾಶವಿಲ್ಲವೇ ಸ್ಥಳೀಯ ಅಧಿಕಾರಿಗಳು ಈ ಕಡೆ ನಿಗವಿಟ್ಟು ಭತ್ತಕ್ಕೆ ಬೆಲೆ ಇಲ್ಲದ ಈ ಕನಿಷ್ಟ ಕಾಲದಲ್ಲಿ ಒಡಲೈತರ ಸಹಾಯಕ್ಕೆ ನಿಂತು ವ್ಯಾಪಾರಿಗಳ ಹೊಡೆತದಿಂದ ತಪ್ಪಿಸಲಾರರೇ.

ಐ. ಪಿ. ಮೂದಪ್ಪ.

(ಈ ಬಾಬಿನಲ್ಲಿ ಸರ್ಕಾರದವರು ನಿಬಂಧನೆ ಮಾಡಬೇಕಾಗಿಲ್ಲ. 1 ಗಾಡಿಗೆ 120 ಪರೆಗಿಂತ ಹೆಚ್ಚಿಗೆ ಕೊಡುವುದಿಲ್ಲವೆಂತ ಹೇಳುವುದು ಮೂರುವರ ಕೆಲಸವಾಗಿದೆ. ಸಂ. ಕೊ.)

ಪೋಸ್ಟಲ್ ಅಡಚಿಣಿ.

ಅಯ್ಯಾ,

ನನಗೆ ಕಳೆದ ಆದಿತ್ಯವಾರ ಅಂದರೆ ತಾ. 29ರಲ್ಲು ಸೋಮವಾರಪೇಟೆಗೆ ಹೋಗುವ ಉದ್ದಿಶ್ಯವಿದ್ದುದರಿಂದ ಇಲ್ಲಿಂದ ಸೋಮವಾರಪೇಟೆಗೆ ಹೋಗುವ ಕಾವೇರಿ ಸರ್ವಿಸಿನಲ್ಲಿ ಪ್ರಯಾಣ ಮಾಡಿದೆನು. ಇಲ್ಲಿಂದ ಹೊರಡುವಾಗ ಎಲ್ಲವೂ ಸರಿಯಾಗಿತ್ತು. ಆದರೆ ಸುಂಟಿಕೊಪ್ಪಕ್ಕೂ ಫ್ರೇಜರ್‌ಪೇಟೆಗೂ ಮಧ್ಯೆ ಬಸ್ಸು ನಿಂತು ಹೋಗಿ ಅದನ್ನು ರಿಪೇರಿ ಮಾಡಲು ಸುಮಾರು 15 ನಿಮಿಷ ಹಿಡಿಯಿತು. ಹಾಗೂ ಹೀಗೂ ಮಾಡಿ ಕೇರಿಯಿಂದ ಎಂಟುಕಾಲು ಗಂಟೆಗೆ ಹೊಂಟ ಬಸ್ಸು ಫ್ರೇಜರ್ ಪೇಟೆಗೆ 10 ಗಂಟೆಗೆ ತಲಪಿತು. ಅಲ್ಲಿಯೇ ಅಪ್ಪೆತ್ತಿಯ ಒಳ ಬಸ್ಸು ನಿಂತಿತು. ನನಗೆ ಈ ಬಸ್ಸು ಫ್ರೇಜರ್‌ಪೇಟೆಯಿಂದ ಸೋಮವಾರಪೇಟೆಗೆ ಮತ್ತು ಕೊಡ್ಲಿಪೇಟೆಗಳಿಗೆ ಟಪ್ಪಾಲನ್ನು ಸಾಗಿಸುತ್ತದೆಂದು ಗೊತ್ತೇ ಇರಲಿಲ್ಲ ಆದ್ದರಿಂದ ನಾನು ಬಸ್ಸನ್ನು ನಿಲ್ಲಿಸಿದಕಾರಣವನ್ನು ಡ್ರೈವರನಲ್ಲಿ ಕೇಳಿದೆನು. ಅವನ ಕೈವನು ಟಪ್ಪಾಲನ್ನು ಪೋಸ್ಟಾಫೀಸಿನಿಂದ ತೆಗೆದುಕೊಳ್ಳುವುದಕ್ಕೆ ಎಂದು ಹೇಳಿದನು. ಆದರೆ ಪೋಸ್ಟಾಫೀಸು ಮುಚ್ಚಿದ್ದಿತು. ಅಲ್ಲಿನ ಪೋಸ್ಟ್ ಮಾಸ್ಟರು ಎಲ್ಲಿಯೋ ವಾಕಿಂಗ್ ಹೋಗಿದ್ದವರನ್ನು ಪೋಸ್ಟಾಫೀಸಿನಿಂದ ಒಂದು ಫರ್ಲಾಂಗ್ ದೂರದಲ್ಲಿ ಎದುರುಗೊಂಡೆವು. ಮೈಸೂರ್ ಬಸ್ಸಿನವನು ಟಪ್ಪಾಲನ್ನು ಗಂಟಿಗೆ ಸರಿಯಾಗಿ ತೆಗೆದುಕೊಳ್ಳುವುದು ಯಾಕೆ ಕೊಡುವುದು ಪೋಸ್ಟ್ ಮಾಸ್ಟರನ ಕೆಲಸವಲ್ಲವೇ? ಆದರೆ ಅವರು ಹಿಂದಕ್ಕೆ ಬಂದು ಟಪ್ಪಾಲನ್ನು ಕೊಡಲು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ತನ್ನ ವಾಕಿಂಗನ್ನು ಮುಗಿಸಿಯೇ ಹಿಂದಕ್ಕೆ ಬಂದರು. ಇದಕ್ಕೆಲ್ಲಾ ಸುಮಾರು ಒಂದು ಗಂಟೆ ಹಿಡಿಯಿತು. ಆಗ ನಾನು ಹೀಗೆಲ್ಲಾ ತಡ ಮಾಡಿದರೆ ತುರ್ತಿನ ಕೆಲಸದ ಮೇಲೆ ಹೋಗುವ ಪ್ರಯಾಣಸ್ಥರ ಗತಿಯೇನು ಎಂದು ಪೋಸ್ಟ್ ಮಾಸ್ಟರನ್ನು ಕೇಳಿದ್ದಕ್ಕೆ, ಅವರು ಇದೆಲ್ಲಾ ಬಸ್ಸಿನವರ ತಪ್ಪು; ಅವರು ಗಂಟೆಗೆ ಸರಿಯಾಗಿ ಬರುವುದಿಲ್ಲ. ನೋಡಿ, ಐದಾರು ಮಂದಿ ಗಂಟೆಗೆ ಬರಬೇಕಾದವರು ಇಷ್ಟು ತಡ ಮಾಡಿದ್ದಾರೆ ಎಂದರು. ಮೈಲಿನ್ನು ಸಾಗಿಸುವ ಉಗಿಬಂಡಿಯೇ ಎಷ್ಟೋ ಸಲ ಅಕಸ್ಮಾತ್ತಾಗಿ ರಿಪೇರಿಗೆ ಬಿದ್ದು ತಡವಾಗುತ್ತದೆ. ಅಂಥಾದ್ದರಲ್ಲಿ ಈ ಬಸ್ಸನ್ನು ಹೇಗೆ ದೂಷಿಸುವುದು? ಬಸ್ಸು ದಾಟುವ ವರೆಗೆ ಕಾದು ತನ್ನ ಕೆಲಸವನ್ನು ಪೂರೈಸುವುದು ಪೋಸ್ಟ್ ಮಾಸ್ಟರನ ಕೆಲಸವಲ್ಲವೇ?

ಇಂಥಾ ಕುಂದುಕೊರತೆಗಳನ್ನು ಇದಕ್ಕೆ ಸಮ್ಬಂಧಪಟ್ಟ ಮೇಲಧಿಕಾರಿಗಳು ಸರಿಪಡಿಸದಿದ್ದರೆ ಪ್ರಯಾಣಸ್ಥರು ಪೋಸ್ಟ್ ಮಾಸ್ಟರ್ ಜನರಲ್‌ರವರಿಗೆ ರಿಪೋರ್ಟು ಮಾಡುವ ಸಂದರ್ಭವು ಬರಬಹುದು. ಹ್ಯಾಗೂ ನಾನು ಸೋಮವಾರಪೇಟೆಗೆ ತಲಪಿದೆನು. ಆದರೆ ಪ್ರಯೋಜನವೇನು? ಬಂದ ಕಾರ್ಯವು ಆ ಪೋಸ್ಟ್ ಮಾಸ್ಟರನ ವಾಕಿಂಗಿನ ದೆಸೆಯಿಂದ ನಿಷ್ಪ್ರಯೋಜನವಾಯಿತು. ಆದ್ದರಿಂದ ಇನ್ನು ಮುಂದಾದರೂ ಪೋಸ್ಟ್ ಮಾಸ್ಟರು ಬಸ್ಸು ಬರುವ ಸಮಯಕ್ಕೆ ಸರಿಯಾಗಿ ಅವರು ಅಲ್ಲಿಯೇ ಇದ್ದು ಟಪ್ಪಾಲು ಚೀಲಗಳನ್ನು ಕೊಡುವಂತೆ ಸ್ಥಳೀಯ ಅಧಿಕಾರಿಗಳು ಮಾಡುವರಾಗಿ ನಂಬುತ್ತೇನೆ.

'ಪ್ರಯಾಣಿಕ'

ಕನ್ನಡಿಯರ ನವೀನ ವಿದ್ಯೆ.

ಕೊಡಗು ಹಿಂದೂದೇಶದಲ್ಲಿ ಚುಕ್ಕೆಯಂತಿದ್ದರೂ ಅವರ ಪ್ರಖ್ಯಾತಿಯನ್ನು ವಿವರಿಸಲಸದಳವಾಗಿದೆ. ಯಾವುದಾದರು ಒಂದು ದೇಶವು ಮುಂದುವರಿದಿದೆ ಎಂದರೆ ಅದರಲ್ಲಿನ ಹೆಂಗಸರು ವಿದ್ಯಾವಂತರಾಗಿರಬೇಕು. ಯಾಕೆಂದರೆ ಮುಂದಿನ ಜನಾಂಗದ ಏಳಿಗೆಗೆ ತಾಯಿಯೇ ಕಾರಣಳು. ಯಾವ ದೇಶದಲ್ಲಿ ಹೆಂಗಸರು ಗಂಡಸರು ಒಗ್ಗಟ್ಟಿನಿಂದ ಕೆಲಸ ಮಾಡುತ್ತಾರೊ ಅದು ಮುಂದುವರಿಯಲು ಬಹಳವಾದ ಸೌಕರ್ಯಗಳಿವೆ. ಅಲ್ಲದಿದ್ದರೆ ರೆಕ್ಕೆಹೋದ ಹಕ್ಕಿಯು ಆಕಾಶದಲ್ಲಿ ಹಾರಿದಂತಾಗುವುದು.

ಈಗಿನ ಕಾಲದಲ್ಲಿ ನವೀನ ವಿದ್ಯೆಯಿಂದ ತುಂಬಿ ತುಳುಕಾಡುವ ಕನ್ನಡಿಯರು ಮದುವೆ ಮಾರ್ಕೆಟ್ಟಿನಲ್ಲಿ ಬಹಳ ಅಗ್ಗವಾಗಿದ್ದಾರೆ. ಯಾಕೆಂದರೆ ಪರದೇಶದ ವಿದ್ಯೆಯು ನಮ್ಮನ್ನು ವಶಪಡಿಸಿಕೊಳ್ಳಿಸಿದೆ. ಮನುಷ್ಯನ ಜೀವನೋಪಾಯಕ್ಕೆ ಈ ವಿದ್ಯೆಯು ಅಡ್ಡ ಬಂದಿದೆ. ಇದರಿಂದ ಪರದೇಶಗಳ ಏಳಿಗೆಗೆ ಅನುಕೂಲವಿದೆ. ಪದ್ಧತಿಯನ್ನೂ ನಡತೆಯನ್ನು ನೂಲೆಗೊತ್ತಿ ಮೂಕೈ ಭೂಮಿಯನ್ನು ತಲ್ಲಣಗೊಳಿಸಿದೆ. ಹುಟ್ಟಿದಾದಿನಿಂದಲೆ ಊಟದ ರೀತಿಯು ಬದಲಾಯಿತು. ಉಡುಪು ನಕಲಿಯ ಮನೆಯನ್ನು ಸೇರಿತು. ಮೂತು ಪರದೇಶದಾಯಿತು. ವಿದ್ಯೆಯು ನವೀನ ರೀತಿಯನ್ನು ಅನುಸರಿಸಿತು. ಡಿಗ್ರಿ ಪಡೆದಾಯಿತು. ಜೀವನೋಪಾಯ ಕಾಣದಾಯಿತು. ಮುಂದಿನ ಗತಿ ಏನು?

ಡಿಗ್ರಿ ಪಡೆದು ಲಾ, ಯೂ ಪ್ರೊಫೆಸರುಗಳಾದ ಗಂಡುದಿಯರು ದೊರಕಿದರೆ ನೋಟ್ಸ್ ಬರೆಯಲು ಹೆಂಡತಿಯರಿಗೆ ಅನುಕೂಲವಾಯಿತು. ಈ ರೀತಿ ತನ್ನ ಪತಿಗೆ ಸಹಾಯವೂಡಿದಾಯಿತು. ಎಲ್ಲಾ ಪತ್ನಿಯರಿಗೆ ಈ ರೀತಿಯ ಗಂಡುದಿಯರೆಲ್ಲಿಂದ; ಡಿಗ್ರಿ ಪಡೆದರೆ, ಅಷ್ಟರ ವರೆಗೆ ಖರ್ಚು ಮಾಡಿರುವುದಕ್ಕಿಂತ ಹೆಚ್ಚು ಹಣ ಉದ್ಯೋಗ ಹುಡುಕಲಿಕ್ಕೆ ಈಗ ಬೇಕಾಗುತ್ತೆ. ಲಾ ಓದಿದರೆ ತಮ್ಮ ಸೂಟಿಗಿರುವ ಹಣ ಈಗಿನ ಕಾಲದಲ್ಲಿ ಹೆಂಡತ್ತಿಯು ಬರುವಾಗಲೇ ತರಬೇಕು. ಗಂಡುದಿಯರು ಈ ರೀತಿ ಸಿಕ್ಕದ ಪಕ್ಷ ಅವರ ವಿದ್ಯೆಗೆ ತಮ್ಮ ತಂದೆ ತಾಯಿಗಳು ಸಹಾಯವೂಡಿಯೊದರೂ ತಮ್ಮನ್ನು ಅವರಿಗೆ ಮದುವೆವೂಡಬೇಕು. ಇದಲ್ಲವೆ ನವೀನ ನಾಗರಿಕತೆ? ಇದಲ್ಲವೆ ನವೀನ ವಿದ್ಯಾವಂತರ ಜೀವನ ಕ್ರಮ?

ನವೀನ ವಿದ್ಯೆಯು ಹುಡುಗಿಯರ ತಾಯಿ ಮನೆಯನ್ನು ನಾಶವೂಡಲೆಳಸಿತು. ಹುಡುಗರಿಗಿಂತ ಹೆಸರುವಾಸಿಯನ್ನು ತರುವ ಹುಡುಗಿಯು ತನ್ನ ಮನೆಯಲ್ಲಿ ಹುಟ್ಟಿದೆಂಬದಾಗಿ ನಾನಾ ರೀತಿ ಖರ್ಚು ಮಾಡಿ ಅನ್ಯರ ಮನೆಯನ್ನು ಸಾಕಲಿಕ್ಕಾಯಿತು. ಕಡೆಗೆ ಯಾರಿಗೂ ಗಂಜಿ ಇಲ್ಲದಾಗುವುದು ತಂದೆ ತಾಯಿಯರು ನವೀನ ವಿದ್ಯೆಯ ನಕಲಿ ಹುಡುಗಿಯರಿಗೆ ಸರಿಯಾದ ಗಂಡನನ್ನು ಕಾಣದೆಯೋ, ಅವಳ ಖರ್ಚನ್ನು ಸಹಿಸಲಾರದೆಯೋ, ಮಗಳಿಗೂ ಅಳಿಯನಿಗೂ ಬೇಕಾದ ಹಣದ ಅಭಾವದಿಂದಲೋ, ಯಾ ಇನ್ನಿತರ ಮುಂದಿನ ಗತಿಯನ್ನು ಕಾಣಬಾರದೆಂಬ ಕಾರಣದಿಂದಲೊ ಕಣ್ಣುಮುಚ್ಚುವರು. ಈ ರೀತಿಯ ನವೀನ ವಿದ್ಯೆಯು ಯಾರಿಗೆ ಸಂಬೇಳುವುದು? ಹಾಗಾದರೆ ಕನ್ನಿಕೆಯರ ನಿಜವಾದ ವಿದ್ಯೆಯು ಎಂಥಾದ್ದಾಗಿಬೇಕು.

ವಿದ್ಯೆಯೆಂದರೆ ಒಮ್ಮಬರಹವಲ್ಲ. ವಿದ್ಯೆಯು ಮನುಷ್ಯನನ್ನು ಮನುಷ್ಯತ್ವಕ್ಕೆ ತರುವುದು. ಕಮ್ಮಿತರದ ಉಡುಪು ನಯವೂಡು ಇದ್ದರೆ ವಿದ್ಯಾವಂತನಲ್ಲವೆಂತ ಯೋಚಿಸುತ್ತಾರೆ. ಈಗಿರುವ ಕಣ್ಣುಗಳಿಗೆ ಕಂಡರೂ, ಸುಯೂದ ಕಣ್ಣುಗಳಿಂದ ನೋಡಿದರೆ ಗುಣವೂ ನಡತೆಯೂ ವಿದ್ಯೆಯೆನಿಸುವುದು. ಈಗ ಸ್ಕೂಲುಗಳಲ್ಲಿ ಕಲಿಸುವ ವಿದ್ಯೆಯು ವಿದ್ಯವಲ್ಲ. ಅವು ಕಲಿಸಬಹುದಾದ ಅನಾವಶ್ಯದ ಕೆಲವು ಭಾಗಗಳನ್ನು ಅನಾವಶ್ಯವಿರುವುದಕ್ಕೆ ಉಪಯೋಗಿಸಬಹುದು. ಜಾತ್ಯೆ, ಭೂಗೋಳ ಶಾಸ್ತ್ರ, ವಿಜ್ಞಾನ ಶಾಸ್ತ್ರದ ಕೆಲವು ಭಾಗ, ಇಂಗ್ಲಿಷಿನ ಕೆಲವು ಭಾಗ, ಇವುಗಳನ್ನು ತೆಗೆಯಬಹುದು. ಇವುಗಳನ್ನೆಲ್ಲ ಸೂಕ್ಷ್ಮ ರೀತಿಯಲ್ಲಿ ಕಥಾ ರೀತಿಯಲ್ಲಿ ಕಲಿಸಿ ಅದರ ಬದಲು, ಕೈಗಾರಿಕೆಯ ಕೆಲಸವನ್ನೂ, ಕೃಷಿ ಕೆಲಸದ ಪೂರ್ತಿ ಭಾಗವನ್ನೂ ಅಡಿಗೆ ಕೆಲಸವನ್ನೂ ಕಲಿಸುವುದು ಉತ್ತಮ.

ತಾಯಿಯು ಯಾವುದರಲ್ಲಿ ಅಗ್ರಗಣ್ಯಳೊ ಅದನ್ನೆ ಮಕ್ಕಳು ಅನುಸರಿಸುವರು. ನಿಮ್ಮ ಕನ್ನಿಕೆಯರು ಧೀರರು, ವೀರರು, ಕೆಲಸಗಾರರು ಅಲ್ಲದಿದ್ದರೆ ಅವರ ಮಕ್ಕಳನ್ನು ಹೀಯಾಳಿಸಲು ಕಾರಣವಿಲ್ಲ ಮಕ್ಕಳ ಸಚ್ಚಾರಗಳು ಕೇವಲ ತಾಯಿಯರಿಂದಲೆ ಹುಟ್ಟಬೇಕು. ಆ ವೇಲೆ ಚರಿತ್ರೆಯನ್ನು ಕಥಾ ಭಾಗದಲ್ಲಿ ತಿಳಿಯುವರು. ನೀವು ನಿಮ್ಮ ಮಕ್ಕಳಿಗೆ ನಿಮ್ಮ ಮಾತೃ ಭಾಷೆಯನ್ನೆ ಮೊದಲು ಕಲಿಸಿರಿ. ಇತರರ ಭಾಷೆಯನ್ನು ಕದಿಯಲು ಯತ್ನಿಸಬೇಡಿ. ನೀವು ಪರಸ್ಪರ ಮಾತಾಡುವಾಗ ಪರಭಾಷೆಯನ್ನು ಉಪಯೋಗಿಸಬೇಡಿರಿ. ಶುಚಿತ್ವವನ್ನು ಮುಂದಾಗಿ ಕಲಿಸಿರಿ. ಆರೋಗ್ಯ ಕ್ರಮಗಳನ್ನು (ಹೈಜೀನ್) ಉಪಯೋ

ದೇವರನ್ನು ದೂಷಿಸಬೇಡಿ. ಸಂಗೀತವು ಕೆಲವು ಮಟ್ಟಿಗೆ ಸಮಯ ಕಳೆಯಲು ಉಪಯೋಗಿಸುವಂಥಾದ್ದಾದರೂ ಯುಪಕರು ಎಂದೂ ನಿಮ್ಮಲ್ಲಿಂದ ಹೋಗದಂತೆ ಇರುವ ಸಂಗೀತವನ್ನು ಹಾಡಬೇಡಿ ಕಲವು ಮಟ್ಟಿಗೆ ಮಕ್ಕಳ ದೇಹಪುಷ್ಟಿಗಾಗಿ ಡ್ರಿಲ್ ವಗೈರೆ ಫಿಜಿಕಲ್ ವಿದ್ಯೆಯನ್ನು ಕೊಡಿರಿ.

ಯಾವ ನಿಮ್ಮ ಭಾಗದಲ್ಲಿ ಈ ರೀತಿಯ ವಿದ್ಯೆಯಿಲ್ಲವೋ ಆ ಸ್ಥಳಕ್ಕೆ ನಿಮ್ಮ ಮಕ್ಕಳನ್ನು ಕಳುಹಿಸುವುದಿಲ್ಲವಾಗಿ ಹಟ ಹಿಡಿಯಿರಿ. ಹಿಂದೂ ದೇಶದ ಹೆಂಗಸರು ಪ್ರಪಂಚದ ಬೇರೆ ಹೆಂಗಸರಿಗಿಂತ ಹಟಮಾರಿಗಳು. ಒಳಗಿಂದೊಳಗೆ ನಮ್ಮ ಗಂಡಸರು ಅವರಿಗೆ ತಲೆಬಾಗಿ ನಿಂತು ಅವರ ಅವಶ್ಯತೆಗಳನ್ನು ನೀಗುತ್ತಲಿರುವರು. ನಿಮ್ಮ ಪೂರ್ವಿಕರನ್ನು ಆಲೋಚಿಸಿರಿ ಕಂತಿ, ಮೈತ್ರಿ, ಪದ್ಮಿನಿ, ತಾರಾಬಾಯಿ, ಚಾಂದಬೀಬಿ, ಅಹಲ್ಯಾಬಾಯಿ, ಮೊದಲಾದವರು ತಮ್ಮ ರಕ್ತಸಮ್ಮಂದದಿಂದ ಈ ರೀತಿ ಹೆಸರುವಾಸಿಯನ್ನು ಪಡೆದರೊ, ಯಾ ತಮ್ಮ ತಂದೆ ತಾಯಿಯರು ತಿದ್ದುಪಡಿಸಿ ಈ ರೀತಿ ಅವರನ್ನು ಧೀರವೀರರಾಗಿ ಮಾಡಿದರೊ ಎಂಬದನ್ನು ಇನ್ನೊಂದಾವೃತ್ತಿ ಚರಿತ್ರೆಯನ್ನು ಮಗುಚಿದರೆ ನಿಮ್ಮ ನಕಲಿ ಉಡುಪು, ಕಾಣುವ ಕಣ್ಣಿಗಿಂದವ ಕನ್ನಡಿಯೂ, ಸದ್ಗತಿಗೆ ವಿರೋಧವಾಗಿರುವ ತಲೆ ಬಾಜುವಳೆಯೂ ದೂರವಾಗುವುದಲ್ಲದೆ, ಇವುಗಳೆಲ್ಲವೂ ಮಿಥ್ಯವೆಂತಲೂ, ಈ ರೀತಿಯಾಗಿ ಜೀವನ ಕಳೆಯುವ ಹುಳಗಳು ಅತ್ಯಲ್ಪ ಹಣ್ಣಿನಲ್ಲಿ ಬಹಳವಾಗಿದೆಂಬದಾಗಿ ಮಕ್ಕಳನ್ನು ಹಡೆದ ತಾಯಿಯರು ಆಲೋಚಿಸಿದರೆ ಮುಂದಿನ ಜನಾಂಗದ ಏಳಿಗೆಯನ್ನು ಏನೆಂದು ವರ್ಣಿಸಲಿ.

ಕೆ. ಬಿ. ಪೊನ್ನಪ್ಪ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ದಾಮು ಶಾಯಿ 31% ಮಾತ್ರ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಜಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಜರ್,
'ಪೂವಯ್ಯ ವಿಲ್ಲಾ,'
ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

(12—9)

Wanted.

Assets 17500000 Exeeeds.	Pre·—Income 33 Lacks.

Realy Capable and Influential **Special Agent** having organising Capacity either on commission basis or salary for the NATIONAL INSURANCE CO·· LTD·· Calcut.a· (Est 1906·)

Please apply to—

CHIEF ORGANISER·
National Insurance Co·· Ltd··
Arcot Srinivas Char·St··
Bangalore City·

12—6

೪೦ ವರ್ಷಗಳಿಂದ ಅಘಟಿತವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕ ಕಂಪನಿ ೧೮೫೩

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಒರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(52—24) ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

EMPIRE OF INDIA
Life Assurance Company, Limited.

Established 1897.

INTERIM BONUS on Policies becoming claims before 1st March 1934 INCREASED TO

Rs. 16 per annum per Rs. 1000/— Assured on Whole Life Assurances

and

Rs. 14 per annum per Rs. 1000/— Assured on Endowment Assurances.

Head Office :—
EMPIRE OF INDIA LIFE BUILDING,
Bombay

Branch Office :—
152/3, COMMERCIAL STREET,
Bangalore.

52—17

ಯು೦. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು, ಇವರ

ಅನುಭವಸಿದ್ಧ ಔಷಧಗಳು.

೧. **ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕ್ಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಒಜ್ಜುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. **ಅಶೋಕಾರಿಷ್ಟ ಮತ್ತು ಮೂತ್ರೆ**—ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕವಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವದು. 1 ಬಾಟ್ಲಿ ಔಷಧಕ್ಕೂ, 1 ಡಬ್ಬಿ ಮೂತ್ರೆಗೂ ರೂ. 2—4—0; 2ಕ್ಕೆ ರೂ. 4—4—0.

೩. **ಮೇಹ ಕುಠಾರ**—ಇದು ಮೂತ್ರಸ್ಥಾನದಿಂದ ಕೆಂಪು, ದಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನು, ವ್ರಣವನ್ನು, ಉರಿಯನ್ನು ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0; 3ಕ್ಕೆ ರೂ. 7—0—0.

೪. **ಬಾಲಾಗ್ರಹ ಗುಟಿಕೆ**—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ ರೂ. 0—10—0. 3ಕ್ಕೆ ರೂ. 1—12—0.

(52—18)

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬಾಂಕ್, ಲಿಮಿಟೆಡ್- ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	27,950— 0—0
ಜಮೂಬಂದ ಠೇವಣಾತಿ	—	22,8525—10—8
ವಸೂಲಾದ ಕ್ಷೇಮನಿಧಿ	—	48,840— 3—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5--0--0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,
ಪಟ್ಟವಾಡ ದೇವೈಯ್ಯನವರು,
ಕಾವ್ ಬಹದ್ದೂರ್.

ಟ್ರೆಜರರ್
ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ:
ಮನೆಯಪಂಡ ಯಂ. ಬೆಳ್ಯಪ್ಪನವರು.

ತಾರೀಕು 1—1—1933.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಶೀಘ್ರವೇ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೇ. ಮುಂಡಂಡ ಯಂ. ಬಿದ್ದಪ್ಪನವರು.

ಅಶ್ಕರ ಕೊಪ್ಪಗಿಗೆ ಮೆ: ಜಾರಿರ ಮೂದೈಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೇ. ಮಂಡೇಪಂಡ ಸೋಮೈಯ್ಯನವರು, (ಖಾದಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೇ. ಐನಂಡ ಮೂದಪ್ಪನವರು,

ಪೊನ್ನಂಪೇಟೆನಾಡು—ಮೇ. ಪಿ. ಜೆ. ಮುದ್ದಯ್ಯನವರು,

ಮಕ್ಕು ಆರಮಣಮೂಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಜಿ. ಮೂದಯ್ಯನವರು,

ಸುಂಟಿಕೊಪ್ಪ—ಮೈ. ಅಪ್ಪಚಟ್ಟೋಳಂಡ ಮೂಚ್ಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವತ್ ಫಾರಮ್ಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮೂ ಖರ್ಚಿನ ರಿಜಸ್ಟರ್ ಪುಸ್ತಕಗಳೂ ಮತ್ತು ಚೆಂ' ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಹುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1.78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಎಂದೂ ಹೆಚ್ಚಿನ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ
ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖ್ಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಪೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—48

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—3 ಗಿರಿಗಾಂವ, ಮುಂಬಯಿ.

ಕಾರ್ಡು ಬರೆದರೆ ಈಗಿನ ಕ್ಯಾಟಲಾಗು ಮೂಫಯಾಗಿ ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬಚ್ಚಿಗಳು, ಕೋಟುಗಳು, ಕೇಡ್ರಗಳು, ಮತ್ತು ಸಕಲ ಬೇಟೆಯ ಎಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,

Largest Importers of Firearms and Ammunition
Cheapest priced firm in India,
26—21 **210 Abdul Rehiman Street, BOMBAY.**

Printed & published by M. M. Ganapathi at "Kodagu" Press, Mercara for "Kodagu" Ltd.,